ಕೊರವಂಜಿ



KORAVANJI

Kannada Monthly

ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಬಚ್ಚ
ಶ್ರೀ|| ಕುಮಾರ್
ಶ್ರೀ|| ಅ. ರಾ. ಸೇ.
ಶ್ರೀ|| ಪ್ರಸಾದ್
ಶ್ರೀ|| ರಾಮು
ಶ್ರೀ|| ಕೇಫ
ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಸೆಪ್ಟಂಬರ್
೧೯೬೪

೧೫
ನ. ಪೈ.

ಳಿನಗೆಯ ಮಾಸಪತ್ರಿಕೆ

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್

ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Koravanji, September 1964

ಕೊರವಂಜಿ

ಸಂಪುಟ ೨೩ ಸೆಪ್ಟೆಂಬರ್ ೧೯೬೪ ಸಂಚಿಕೆ ೬

ಕುಹಕಿಡಿಗಳು

ನೇಪಾಳದ ಪಶುಪತಿನಾಥ ದೇವಾಲಯಕ್ಕ ಸರ್ದಾರ್ ಸ್ವರ್ಣಸಿಂಗರು. ಭಕ್ತಿಯಿಂದ ಭೇಟಿಯಿತ್ತಾಗ

—ಚೀಣಿಯರು ದೇವಾಲಯದ ಗಂಟೆಯನ್ನು ಬಾರಿಸಿದರು. ಎನ್ನುವುದು ಶುದ್ಧ ಕುಹಕ !!

*   *   *   *

ನುಣುಪಾದ ಮಖಮಲ್ಲಿನ ರವಿಕೆಯನ್ನು ಯಾಕೆ ಹೆಣ್ಣು ಮಕ್ಕಳು ತೊಡುತ್ತಾರೆ? ಎಂದೊಬ್ಬರು ಕೇಳಿದ್ದಾರೆ.

—ಕರಿಣ, ಸ್ವಾಮಿ !

*   *   *   *

ಮೂರು ತರಹ ಜನರು ಈಗ ಬಹಳ "ಬಿಸಿ" ಆಗಿದ್ದಾರೆ. ರಿಟಾಯರ್ ಆದ ಹಿರಿಯ ಅಧಿಕಾರಿಗಳು, ಮಾಜಿಯಾದ ಮಂತ್ರಿಗಳು ಮತ್ತು ಠೇವಣಿ ಕಳೆದುಕೊಂಡ ಎಂ. ಎಲ್. ಎ ಸ್ಪರ್ಧಿಗಳು.

—ಇವರೆಲ್ಲರೂ ಬೆಂಗಳೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಆಗಲು ಹವಣಿಸುತ್ತಿದ್ದಾರಂತೆ !

*   *   *   *

ದಸರಾದಲ್ಲಿ ಜಂಬೂಸವಾರಿ ಈ ವರ್ಷ ಇರಲಾರದು ಎನ್ನುವ ಸುದ್ದಿಯನ್ನು ಕೇಳಿ—

ಅದರ ಬದಲು ಬೆಂಗಳೂರಿನಲ್ಲೇ ಒಂದು ಜಂಬೂ ಸವಾರಿ ನಡೆಸಿ ಸಚಿವರೆಲ್ಲರೂ ಆನೆ ಸವಾರಿ ಮಾಡಿ ಮೆರೆಯಲಿ, ಎಂದೊಬ್ಬರು ಸಲಹೆ ಮಾಡಿದ್ದಾರೆ—

—ಅಷ್ಟು ಆನೆಗಳು ಸಿಗುತ್ತವೆಯೋ ?

ಸಹಕಾರ ಸೊಸೈಟಿಗೆ ಕನ್ನ ಹಾಕಿದ ಕಳ್ಳರು, ಎಲ್ಲಾ ಹುಡುಕಿದ ಮೇಲೆ, ಏನೂ ಸಿಗದೆ ಇದ್ದ ಕಾರಣ ;

— ನಮಗೆ ಮೊದಲೇ ಪೋಲೀಸಿನವರು ಇಲ್ಲಿಗೆ ಬಂದಿದ್ದಿರಬೇಕು ಅದಕ್ಕೇ ಕುಚೇಲನ ಮಂದಿರವಾಗಿದೆ ಎಂದು ಗಡಬಡಿಸಿದರಂತೆ

* * * *

ಕ್ಯಾಕರಿಸಿ ಎನ್ನುವ ಶಬ್ದಕ್ಕೆ ಉರ್ದುವಿನಲ್ಲಿ ಸರಿಯಾದ ಮಾತೇ ಇಲ್ಲವಂತೆ!

—ಆದರೆ ಆ ಭಾಷೆಯೇ ಇದೆಯಲ್ಲ!!

* * * *

ರಾಜಕೀಯ ಸದ್ಗತಿಯನ್ನು ಬಯಸಿದ ಏಳೆ ರಾಜಕಾರಿಣಿಯು "ಶ್ರೀಶೈಲ ಮಲ್ಲಿಕಾರ್ಜುನ ಸುಪ್ರಭಾತ"ವನ್ನು ಹಾಡುವ ರೇಡಿಯೋವನ್ನು ಕೊಳ್ಳಲು ಪೇಟೆಯೆಲ್ಲಾ ತಿರುಗಾಡಿದನಂತೆ.

* * * *

ಡ್ರೈವರ್ ಇಲ್ಲದ ಆಟೋರಿಕ್ಷಾ ಒಂದು ತಾನೇ ತಾನಾಗಿ ಪೇಟೆಯಲ್ಲಿ ಒಂದು ಮೈಲು ಓಡಾಡಿತಂತೆ.

—ಎಲ್ಲಾ ಆಟೋರಿಕ್ಷಗಳ ಚಲನವಲನಗಳನ್ನು ನೋಡಿದರೆ ಡ್ರೈವರ್ ಕುಳಿತು ನಡೆಸುತ್ತಿದ್ದಾನೆ ಎಂದು ಭರವಸೆ ಬರುವುದೇ ಇಲ್ಲ.

* * * *

ಮೆಡಿಕಲ್ ಕಾಲೇಜ್ ಅಭ್ಯರ್ಥಿಗಳನ್ನು ಭೇಟಿ ಮಾಡಿದ ಆಡಳಿತಾಧಿಕಾರಿಗಳು ಕೆಲವರನ್ನು ಹೃದಯ ಎಂದರೇನು? ಎಲ್ಲಿದೆ? ಎಂದು ಕೇಳಿದರೆಂದು ವರದಿ.

"—ಅವರಿಗೆ ಹೃದಯವೇ ಇಲ್ಲ" ಎಂದು ಪ್ರಸಿದ್ಧಿ ಹೊಂದಿರುವ ಆಡಳಿತಾಧಿಕಾರಿಗಳು ಈ ಪ್ರಶ್ನೆಯನ್ನು ಕೇಳಬಾರದಾಗಿತ್ತು.

* * * *

ಅವಲಕ್ಷಣ ಮುಖದ ಅಪರ ಕರ್ಮದ ಪುರೋಹಿತನಂತಿರುವ ಆ ಪುಢಾರಿ ಇಂತಹ ಒಳ್ಳೆಯ ಮಂತ್ರಿಗಳ ಜತೆ ಇದಾನಲ್ಲಾ! ಅಂದರೆ

—ದೃಷ್ಟಿ ಬಟ್ಟು ಇದ್ದ ಹಾಗೆ ಅವ ಅದೃಷ್ಟದ ಬಟ್ಟು ಎಂದರಂತೆ

* * * *

ಅಮೆರಿಕಾದ ಬಾತು ಕೋಳಿ ಒಂದು ಮಂಗಳೂರಿನ ಬಳಿ ಸಿಕ್ಕಿದೆಯಂತೆ.

— ಈಗ ರಷ್ಯನ್ನರ ಸರದಿ! ಅವರು ಯಾವ ಪಕ್ಷಿಯ ಮಂಗಳೂರಿಗೆ ಕಳಿಸುತ್ತಾರೋ ನೋಡಬೇಕು.

ಉತ್ತರ ದೇಶದಲ್ಲಿನ (ಕೆಲವು) ಕನ್ನಡ ಬ್ರಾಹ್ಮಣರು

ದಕ್ಷಿಣ ದೇಶದಿಂದ ಅತಿಥಿಯಾಗಿ ಹೊಸದಾಗಿ ಬಂದ ಗುಂಡಣ್ಣ 'ಅಂಕಲ್'ಗೆ ಮನೆಮಕ್ಕಳು ಹೇಳುತ್ತಾರೆ: "ನಾವೂ ...ನಾವೂ....ಮತ್ತೇ....ಈಜೇಜಿ ತಿನ್ನುತ್ತೇವೆ, ಯಮ್ಮ್ಯೀಯೇಟಿ ತಿನ್ನುತ್ತೇವೆ, ಯಾರಿಗೂ ಹೇಳಬೇಡಾಂತ ಡ್ಯಾಡಿ-ಮಮ್ಮೀ ಹೇಳಿದ್ದಾರೆ.

ಬಂದ ಅತಿಥಿ ಅದಕ್ಕೆ, "ಹೇಳಬೇಡಾ ಮಗೂ, ಆದರೆ ಅದನ್ನ ಹೇಗೆ ಮಾಡಿಕೊಂಡು ತಿನ್ನುತೀರಿ ಅಂತ. ಹೇಳಬಹುದಲ್ಲ ಆ ಈಜೇಜೇನ ಹೇಗೆ ತಿನ್ನುತ್ತೀರಿ, ಹಾಲಿನಲ್ಲೋ?" ಹಾಗೇನೋ ?

ಅದಕ್ಕೆ ಅರುಣ್, "ಹಾಲಿನಲ್ಲಲ್ಲ ! ಅದು ನಂಗೆ ಸೇರೋಲ್ಲ, ಲೋಳೆ ಥೂ. ಓಯಮ್ಮ್ಯಾ ಎಲ್ಲ್ಯೀಟೀ ಮಾಡಿದರೇ ಚೆನ್ನ ನಂಗೆ, ದೋಸೇಹಾಗಿರುತ್ತೆ."

"ಆಮೇಲೇ ಅ ಯಮ್ಮ್ಯೀಯೋಟೀನ ಹೇಗೆ ತಿನ್ನುತ್ತೀರಿ ?"

"ಆ ಯಮ್ಮ್ಯೀಯೋಟಿನ ಬಂಗಲೆ ಮೋಟಿ ಬುಡೇಮಿಯಾ ಕೈಲಿ ಮಾಡಿಸುತ್ತಾಳೆ ನಮ್ಮಮ್ಮ;

ಆ ಯಮ್ಮ್ಯೀಯೋಟಿ ಯಾತರದೂ ?"

"ಜೀವ್ರೋಯೇಟೀದು. ಕನ್ನಡದಲ್ಲಿ ಯಾರಿಗೂ ಹೇಳಬೇಡಾಂತ ಮಮ್ಮೀ ಡ್ಯಾಡಿ ಹೇಳಿದಾರೆ."

"ಸರಿಕಣಪ್ಪ ಅರುಣ್, ಹೇಳಬೇಡ, ಅದಿರಲಿ, ಅ ಜೀವ್ರೋಯೋಟೀದು ರುಚಿ ಹೇಗಿರುತ್ತೆ ?"

"ಚೆನ್ನಾಗಿರುತ್ತೆ (ಲೊಚ್ ಲೊಚ್) ! ಬೆಳ್ಳುಳ್ಳಿ ಈರುಳ್ಳೀ (ಖಾರ ಅರಿಶಿನ) ಹಾಕಿ ಮಾಡತ್ತಾನೆ ಬಂಗಲೆಮೋಟಿ ಬುಡೇಮಿಯಾ."

ಒಳಗಿನಿಂದ ಅರುಣ್‌ನ ತಾಯಿ ಗದರಿಸಿ ಕೂಗಿದರು, "ಲೋ ಅರುಣ್, ಇಲ್ಲಿ ಬಾ ಪಾಠ ಓದಿಕೋ."

"ಗುಂಡಣ್ಣಾಂಕಲ್ ಹತ್ತಿರ ಮಾತಾಡ್ತಾ, ಇದೀನಮ್ಮ !

"ಅದಿರಲಿ ಇಲ್ಲಿ ಬಾ ಮೊದಲು. ನಿನ್ನ ತಿಂಡೀ ತಿನ್ನು ಬೇಗ, ಸ್ಕೂಲಿಗೆ ಹೊತ್ತಾಗುತ್ತೆ. ದೋಸೇ ಆರಿಹೋಗುತ್ತೆ, ಬಾ."

"ಈಜೇಜೇದೇನಮ್ಮಾ ? ನಂಗೆ ಅದೇ ಬೇಕು, ದೋಸೆ ಹಿಟ್ಟಿಂದು ಬೇಡ."

"ಇಲ್ಲಿ ಬಾರೋ ಹರಟ್ತಾ ಅಲ್ಲೇ ಇರ್ಬೇಡಾ."

ಬಂದೇ ಅಮ್ಮಾ, ದೋಸೆ ಹಿಟ್ಟಿನ ದೋಸೆ ಬೆಂಗಳೂರಿಂದ ಬಂದಿರೋ ಅಂಕಲ ಗಿರಲಿ, ನನಗೆ ಓಯಮ್ಮ್ಯೀಯಲ್ಲ್ಯೀಟೀ ಬೇಕು."

ಒಳಗಿನಿಂದ ಅಮ್ಮ ಗದರಿಸಿಕೊಂಡರು, "ಅರುಣ್, ಬಾಯ್ಮುಚ್, ಬೇಗ ಬಾ ಇಲ್ಲಿ!"

—ಎಚ್. ಎಸ್. ಆರ್.

ಸುದ್ದಿಗಾರರ ಶೈಲಿ

ವಿಷಯ ಹೇಗೆ ಮಾರ್ಪಾಡಾಗುತ್ತದೆ ಅಂತ

— ೧ —

ಕೆಲವು ಲಾಯರುಗಳು ರುಮಾಲನ್ನು ತೆಗೆದು ತಲೆ ಕೆರೆದುಕೊಂಡಾಗ, ನಾಲ್ವರಿಗೆ ಭಟ್ಟತಲೆ ಇದ್ದಿದು ಕಾಣಿಸಿತು. ಆಗ ಸುದ್ದಿಗಾರ ಪ್ರಕಟಿಸಿದ.

ನಾಲ್ಕು ಜನ ಲಾಯರುಗಳು !
ರುಮಾಲು ತೆಗೆದು ನೋಡಿದರೆ....ಖಾಲಿ !!

— ೨ —

ಮಫ್ತಿ ಉಡುಪಿನಲ್ಲಿ ಠಾಕ್ ಠೀಕ್ ಕಂಡ ಪೋಲೀಸಿನವರು ಅಷ್ಟೇ ಠೀಕ್ ಠಾಕಾಗಿದ್ದ ಕಳ್ಳರನ್ನು ಹಿಡಿದರು ಎಂಬ ಸುದ್ದಿಯನ್ನು ಕೇಳಿದಾಗ

ಕಳ್ಳರ ಸಲಹೆ ಮೇರೆ ಪೋಲೀಸಿನವರನ್ನು ಗುರ್ತಿಸಲು ಸಮವಸ್ತ್ರಗಳನ್ನು ತೊಡಿಸಬೇಕು ಎಂದು ನಿರ್ಣಯವಾಯ್ತು. ಎಂದು ಬಿಸಿ ಬಿಸಿ ಸುದ್ದಿ ಪ್ರಕಟಿಸಿದ.

— ೩ —

ಮನೆಯ ಮಕ್ಕಳೊಂದಿಗೆ ಸಲಿಗೆಯಿಂದ ಆಟವಾಡುವ ಅಲ್ಸೇಷಿಯನ್ ನಾಯಿಯು ದಿನಕ್ಕೆ ಎರಡು ಕಿಲೋ ಮಾಂಸವನ್ನು ಸಾಮಾನ್ಯವಾಗಿ ತಿನ್ನುತ್ತದೆ; ಹಸಿವಾದಾಗ ಏನನ್ನಾದರೂ ತಿನ್ನುತ್ತೆ. ಎಂಬ ಸುದ್ದಿಯನ್ನು ಕೇಳಿದಾಗ — ಹೊಟ್ಟೆಗಿಲ್ಲದ ಸುದ್ದಿಗಾರನು ಈ ರೀತಿ ಪ್ರಕಟಿಸಿದ

ಅಲ್ಸೇಷಿಯನ್ ನಾಯಿ ಏನನ್ನಾದರೂ ತಿನ್ನುತ್ತೆ !
ಮಕ್ಕಳನ್ನು ಕಂಡರೆ ಬಲು ಇಷ್ಟ !!

— ೪ —

ಅರವತ್ತು ಮೀರಿದ ಐಶ್ವರ್ಯವಂತ, ಸ್ವತಂತ್ರ ಸರ್ವತಂತ್ರನೊಬ್ಬ ಇಪ್ಪತ್ತರ ಹೆಣ್ಣನ್ನು ಮದುವೆಯಾದ ಸುದ್ದಿಯನ್ನು

“ಹೋರಿ....ಬಂದೇ :: ಮುದಿ ಮೂಸೋದೂ....ಎಂದು ಪ್ರಕಟಿಸಿದ.

ನಮ್ಮ ಮಗು ವಿನೋಬಾಜಿ

ನಮ್ಮ ಮಗುವಿಗೆ ಮೈ ತೋ ಬೆಚ್ಚಗಾಯಿತು ಔಷಧಿ ತರೋಣ ಡಾಕ್ಟರ ಹತ್ತಿರ ಹೋಗಿ ಎಂದಳು ತಾಯಿ. ಡಾಕ್ಟರ ಹತ್ತಿರ ಹೋಗೋದು ಬೇಡ ಅಂತ ಮಗು ಅಳುಕ್ಕೆ ಶುರು ಮಾಡಿತು. ಸಣ್ಣ ಪುಟ್ಟ ಜ್ವರಕ್ಕೆಲ್ಲಾ ಡಾಕ್ಟರ ಹತ್ತಿರ ಯಾಕೆ ಹೋಗಬೇಕು, ಒಂದೆರಡು ದಿನ ನೋಡೋಣ, ಜ್ವರ ಇಳಿಯಬಹುದು. ಎಂದರು ತಂದೆ ; ಮಗುವಿನ ಅಳುವನ್ನು ಕೇಳಲಾರದೆ ನಾನು ಕಷಾಯ ಹಾಕಿ ಕೊಡ್ತೀನಿ, ದೃಷ್ಟಿ ತೆಗೀತೀನಿ ಡಾಕ್ಟರ ಹತ್ತಿರ ಹೋಗೋದು ಬೇಡ, ಮರಿ. ಎಂದು ಅಜ್ಜಿ ಮೊಮ್ಮಗನನ್ನು ಎತ್ತಿಕೊಂಡು ಮುದ್ದಾಡಿದಳು.

ಸಣ್ಣ ಪುಟ್ಟ ಜ್ವರಕ್ಕೆಲ್ಲಾ ಪ್ರಕೃತಿ ಚಿಕಿತ್ಸೆಯೇ ಉತ್ತಮ. ವಿಷದ ಔಷಧಿಗಳನ್ನು ಕಂಡಾಪಟ್ಟೆ ಸೇವಿಸಬಾರದು. ಎಂದರು ವಿನೋಬಾಜಿ, ಪುಟ್ಟ ಜ್ವರ ಕಾಣಿಸಿಕೊಂಡಾಗ, ತಲೆಯ ಸುತ್ತ ಭೂಲೋಕ ಫೇರಿ ಹೊಡೆದಾಗ ಉಹ್ಞು ! ಔಷಧಿ ತೊಗೊಳುಲ್ಲ ಎಂದು ಹಠ ಹಿಡಿದರು.

* * * *

ಮಗುವಿಗೆ ಜ್ವರ ಹೆಚ್ಚಾಯಿತು. ಕೊಟ್ಟ ಕಷಾಯನ - ವಾಂತಿಮಾಡಿಕೊಂಡಿತು. ದೃಷ್ಟಿ ತೆಗೆಯಕ್ಕೆ ಅಂತ ಅಜ್ಜಿ ಕಸಪರಕೇನ ಮೂಲೆಲಿಟ್ಟು ಸುಟ್ಟಾಗ ಮಗು ಚಿಟ್ಟಂತ ಕಿರುಚಿಕೊಂಡಿತು. ಓಡಿ ಹೋಗಿ ಡಾಕ್ಟರನ್ನು ತಂದೆ ಕರೆದುಕೊಂಡು ಬಂದರು ಅಮ್ಮ ಮಗವನ್ನು ಎತ್ತಿಕೊಂಡು ಇನ್ಜಕ್ಷನ್ ಚುಚ್ಚಿಸಿದಳು. ಜ್ವರ ಇಳಿಯಿತು. ಮಗು ಅಪ್ಪ ಅಮ್ಮ ಅಜ್ಜಿ ನಗ್ತಾ ನಗ್ತಾ ಇದ್ದರು.

ವಿನೋಬಾಜೀಗೆ ಜ್ವರ ಇಳಿಯಲಿಲ್ಲ. ಪ್ರಕೃತಿಗೇ ಬಿಟ್ಟರೆ ಬೇಗ ವಾಸಿಯಾಗಲಾರದು ಎನ್ನಿಸಿತು ಔಷಧಿ ತೆಗೆದುಕೊಳ್ಳುತ್ತೇನೆ ಎಂದರು ಡಾಕ್ಟರನ್ನು ಕರೆಸಿದರು ಕೊಟ್ಟ ಔಷಧಿ ಕುಡಿದರು. ಡಾಕ್ಟರು ಹೇಳಿದ ಹಾಗೆ ಕೇಳಿದರು. ಜ್ವರ ಇಳಿಯಿತು. ಭಾರತಕ್ಕೆ ಭಾರತವೇ ಸಂತಸಪಡ್ತು.

* * * *

ನಮ್ಮ ಮಗುವಿನ ತರಹಾನೇ ವಿನೋಬಾಜಿ. ಆದರೆ ನಮ್ಮ ಮಗುವು ನಮ್ಮ ರಕ್ಷಣೆಯಲ್ಲಿದೆ. ವಿನೋಬಾಜಿ ವಿಶ್ವನಾಥನ ಸಂರಕ್ಷಣೆಯಲ್ಲಿದ್ದೇನೆ ಎಂಬುದನ್ನು ಅರಿತಿದ್ದಾರೆ. ಅಷ್ಟೇ ವ್ಯತ್ಯಾಸ.

—ಬಚ್ಚು.

ಭೂಮಿ ಬಿರುಕು ಬಿಟ್ಟಿದೆ

ಹೋಗಿ ಪಾತಾಳದಲ್ಲಿ ಮುಖ ಮರೆಸಿಕೊಂಡು ಬಿಡೋಣ ಅನ್ನಿಸಿತು ಎಂದರು ಡಾಕ್ಟರು. ಪೆಚ್ಚು ಬಡಿದುಹೋಗಿತ್ತು ಅವರ ಮುಖ. ಎಳಕಾದ ಸೂಲಗಿತ್ತಿಯ ಹತ್ತಿರ ಸ್ವಲ್ಪ ಆತ್ಮೀಯವಾಗಿ ಮಾತನಾಡುತ್ತಿದ್ದಾಗ, ಹೆಂಡತಿಯಾದ ಲೇಡಿ ಡಾಕ್ಟರು ಹಠಾತ್ತನೆ ಬಂದರೆ, ಗಂಡು ಡಾಕ್ಟರ ಮುಖ ಹೇಗೆ ಬಿಳುಚುಕೊಳ್ಳುತ್ತೆ ನೋಡಿ, ಹಾಗೆ ಈ ಡಾಕ್ಟರ ಮುಖ ಪೆಚ್ಚು ಬಡಿದುಹೋಗಿತ್ತು. ನನಗೆ ತಿಳಿದ ಹಾಗೆ ಡಾಕ್ಟರು ಸಾಧು ಸ್ವಭಾವದವರು. ಹೆಂಡತಿ ಅಂದು ಆಡಿದ್ದನ್ನೆಲ್ಲಾ ನುಂಗಿಕೊಂಡು ನಗು ನಗುತಾ, ಕಾಲ ತಳ್ಳುವ ಜಾಯಮಾನದವರು. ಆಂದ ಮೇಲೆ ಪೇಚಿಗೆ ಸಿಗುವ ಸಂದರ್ಭ ಕಡಿಮೆ ಮತ್ತೆ ಯಾಕಾದರೂ ಹೀಗೆ ಪೆಚ್ಚು ಬಡಿದಿದ್ದಾರೆ? ಪೆಚ್ಚು ಬಡಿದು ಭೂಮಿ ಬಿರುಕು ಬಿಟ್ಟಿದ್ದಿದ್ದರೆ ಹೋಗಿ ಪಾತಾಳದಲ್ಲಿ ಮುಖ ಮರೆಸಿಕೊಂಡು ಬಿಡಬೇಕು ಎಂದು ಯಾಕೆ ಹೇಳಿದರು ?

ಪೆಚ್ಚು ಬಡಿದವರ ಹತ್ತಿರ ಹುಷಾರಾಗಿ ಮಾತಾಡಬೇಕು. ಯಾಕಪ್ಪಾ ಎಂದು ದೈನ್ಯದಿಂದ ಒಲವಿಸಿಂದ ಮಾತಾಡಿದರೆ, ನಿನಗ್ಯಾಕಯ್ಯಾ ನನ್ನ ದುಃಖ, ನಿನ್ನ ಪಾಡು ನೀನು ನೋಡಿಕೋ ಎಂದು ತಿರುಗಿಬಿದ್ದರೂ ಬಿದ್ದರೇ? ಇಂತಹ ಪೆಚ್ಚು ಕೆಲಸ ಏನಾದರೂ ಮಾಡಿದೆಯಾ ಎಂದು ಉದಾಹರಣೆಗಳು ಕೆಲವನ್ನು ಕೊಟ್ಟರೆ, ಅವುಗಳಲ್ಲಿ ಒಂದರ ತರಹ ಮಣ್ಣು ತಿನ್ನುವ ಕೆಲಸ ಅವರು ಮಾಡಿದ್ದರೆ, ದುಃಖ ಪರಿತಾಪ ಅವರಿಗೆ ಹೆಚ್ಚಬಹುದು. ಹಾಗಾಗಿ ಪೆಚ್ಚುತನ ಉಲ್ಬಣಗೊಳ್ಳಬಹುದು ಆಗಲೂ ಸಹ ಅವರು ಎದ್ದುಬಂದು ಒದ್ದುಬಿಡಬಹುದು.

ಇವೆಲ್ಲವನ್ನೂ ಗ್ರಹಿಸಿದ್ದ ಕಾರಣ ಹುಷಾರಾಗಿ "ಯಾಕೆ ಡಾಕ್ಟರೆ ಹಾಗನ್ನುತ್ತೀರಿ? ಹೀಗೇಕೆ ಪೆಚ್ಚುಮೋರೆ ಹಾಕಿಕೊಂಡಿದ್ದೀರಿ. ರಾತ್ರಿ ಸರಿಯಾಗಿ ನಿದ್ರೆ ಬರಲಿಲ್ಲವೇ? ರೋಗಿಗಳ ಕಾಟ ಹೆಚ್ಚಾಗಿತ್ತೇ? ಅಥವಾ ಮೈಗೆ ಹುಷಾರಿಲ್ಲವೇ ಎಂದು ಕೇಳಿದೆ. ವೋಟು ಕೇಳುಕ್ಕೆ ಬಂದ ಅಭ್ಯರ್ಥಿಯ ತರಹ ದೈನ್ಯದಿಂದ ಕೇಳಿದೆ

"ನಿನ್ನ ಮುಸಡೀ ತರಹ ಕಾಣುತ್ತೇನಯ್ಯ. ನನ್ನ ಮುಖ ಎಂದರು ಡಾಕ್ಟರು ನಾನು ಕೇಳಿದ ಪ್ರಶ್ನೆ ಗುರಿ ಮುಟ್ಟಿತು. ಡಾಕ್ಟರು ರೇಗುಲ್ಲ ಎಂದು ಖಚಿತ

ವಾಯಿತು. ಧೈರ್ಯವಾಗಿ ಜೇಬಿನಿಂದ ನಶ್ಯದ ಡಬ್ಬಿ ತೆಗೆದು ತೆರೆದು ಅವರ ಮುಂದೆ ಚಾಚಿದೆ. ಒಂದು ಚಿಟಿಕಿ ತೆಗೆದು ಮೂಗಿಗೆ ಮೂರಂಗುಲ ದೂರದಲ್ಲಿ ಹಿಡಿದು ಹಗೂರಾಗಿ ಅಲ್ಲಿಂದಲೇ ಮೂಸುತ್ತ ಡಾಕ್ಟರು ಮಾತು ಮುಂದು ವರಿಸಿದರು.

"ನೋಡಪ್ಪಾ! ಇವತ್ತೊಂದು ಪೆಚ್ಚು ಕೆಲಸ ಮಾಡಿಕೊಂಡೆ. ನನ್ನ ನಾಲಿಗೆಯ ತೀಟೆ ನಿನಗೆ ಗೊತ್ತಲ್ಲ! ಹೊತ್ತಿಲ್ಲದ ಹೊತ್ತಿನಲ್ಲೂ ಕತ್ತರಿಸುವಂತಹ ಮಾತಾಡಿಬಿಡೋದು ಆಮೇಲೆ ಅಯ್ಯಯ್ಯೋ ಅಂತ ದುಃಖ ಪಡ್ತೋದು ಈಚೀಚೆಗೆ ಇದನ್ನೆಲ್ಲಾ ಬಹಳ ಪುಟ್ಟಿಗೆ ಹತೋಟಿಯಲ್ಲಿಟ್ಟುಕೊಂಡಿದ್ದೇನೆ ಎಂದು ಸಂತಸ ಗೊಂಡಿದ್ದೆ. ಆದರೆ ಇವತ್ತು ಜಾರಿ ಬಿದ್ದೆ." ಎಂದು ಹೇಳಿ ಮೇಲುಗಣ್ಣು ಹಾಕಿ ಕೊಂಡು ಕೂತರು.

"ನೀನು ಯಾವಾಗಲೂ ಹೀಗೆ, ಯಾವುದಾದರೂ ಒಂದು ಸಣ್ಣ ಮಾತಿಗೆ, ವಿಪರೀತ ಅರ್ಥ ಕಲ್ಪಿಸಿಕೊಂಡು ಕೊರಗುವ ಸ್ವಭಾವ. ಅದೇನಾಯಿತು ಹೇಳು.

ಆಮೇಲೆ, ಈ ವಿಚಾರಕ್ಕೆ ದುಃಖ ಪಡಬೇಕೇ-ಅಥವಾ ನಗಬೇಕೇ ಎಂದು ನಾನು ತೀರ್ಪು ಕೊಡುತ್ತೇನೆ ಎಂದೆ.

ಡಾಕ್ಟರು ಉತ್ತರಿಸಿದರು.

ಸುಮಾರು ೨೨-೨೫ ವಯಸ್ಸಿನ ಹೆಣ್ಣು ಮಗಳೊಬ್ಬಳನ್ನು ಅವಳ ಗಂಡ ದವಾಖಾನೆಗೆ ಕರೆದುಕೊಂಡು ಬಂದಿದ್ದ. ಬಲು ಚೆಲುವೆ ಆ ಹೆಣ್ಣು. ಏದುಬ್ಬಸ ಪಡುತ್ತಿದ್ದರೂ ಅದೂ ಚೆಂದವನ್ನು ಎತ್ತಿ ಕಾಣಿಸುತ್ತಿತ್ತು. ಮೆಲ್ಲಗೆ ಬಂದು ಎದುರು ಕುರ್ಚಿಯ ಮೇಲೆ ಕೂತಳು. ಆಕೆಯ ಉಸಿರಾಡುವಿಕೆ ಕುಳಿತ ನಿಲುವು ಇವನ್ನು ನೋಡಿಯೇ "ಎಷ್ಟು ದಿನದಿಂದ ಹೀಗೆ ಉಬ್ಬಸ ಬರುತ್ತಿದೆಯಮ್ಮ. ಯಾವಾಗಿ ನಿಂದ ಹೆಚ್ಚಾಗಿದೆ" ಎಂದು ಕೇಳಿದೆ.

"ಮದುವೆಯಾದ ಮೂರು ತಿಂಗಳಿಂದ ಶುರುವಾಯಿತು ಡಾಕ್ಟರೇ ಕಳೆದ ಮೂರು ತಿಂಗಳಿಂದ ಬಹಳ ಹೆಚ್ಚಾಗಿದೆ. ದಿಂಬಿನಮೇಲೆ ತಲೆ ಇಡೋ ಹಾಗಿಲ್ಲ. ಎಂದಳು ಆಕೆ. ಕಂಠ ಎಷ್ಟು ಮಧುರವಾಗಿತ್ತು ಅಂತ.

"ಏನೇನು ಔಷಧಿ ಮಾಡಿದ್ದೀರಮ್ಮಾ" ಎಂದೆ.

"ಯಾರು ಯಾರೆಲ್ಲಾ ಹೇಳಿದ ಔಷಧಿಗಳನ್ನೆಲ್ಲಾ ಮಾಡಿದ್ದಾಯಿತು. ಡಾಕ್ಟರೇ ? ಒಂದೆರಡು ದಿನ ವಾಸಿಯಾದ ಹಾಗೆ ಇರುತ್ತೆ. ಮತ್ತೆ ತಿರುಗಿ ಅಮರಿ

ಕೊಳ್ಳುತ್ತೆ." ಎಂದಳು. ಪೂರ್ತಿ-ವಾಸಿಯಾಗುವ ಹಾಗೆ ಔಷಧಿ ಕೊಡಿ ಡಾಕ್ಟರೇ. ಇಲ್ಲದೆ ಇದ್ದರೆ ಸುಖವಾಗಿ ಸಾಯೋ ಹೋಗೋ ಹಾಗೆ ಔಷಧಿ ಕೊಡಿ ಎಂದೂ ಹೇಳಿದಳು.

ಪ್ರಾಯದ ಹುಡುಗಿ. ನೀನು ಹೀಗೆಲ್ಲಾ ಕೆಟ್ಟ ಮಾತು ಆಡಬಹುದೇನೇ ತಾಯಿ! ಮಸಲ ಉಬ್ಬಸ ಹೆಚ್ಚಾದರೆ ತೆಪ್ಪಗೆ ಕೂತರೆ ಸಾಕು. ಅದೇ ಇಳಿದು ಹೋಗುತ್ತೆ. ಇದಕ್ಕೆ ಯಾಕೆ ಇಷ್ಟೆಲ್ಲ ಬೇಸರ ಪಡಬೇಕು" ಎಂದೆ.

ತೆಪ್ಪಗೆ ಕೂತುಬಿಟ್ಟರೆ ಮನೆ ಕೆಲಸ ಯಾರು ಮಾಡ್ತಾರೋ?" ಎಂದು ಅಣಕಿಸುತ್ತಾ ಹೇಳಿದಳು. ಎಂತಹ ವ್ಯಂಗ್ಯದ ದನಿ ಅಂತ

"ಅದು ಏನು ಮಹಾ ಸಮಸ್ಯೆ. ತಾಯಿ. ಮನೆ ಕೆಲಸ ಮಾಡುಕ್ಕೆ ಒಬ್ಬ ಕೂಲಿಯಾಳನ್ನು ಇಟ್ಟುಕೊಂಡರೆ ಆಯಿತು. ಉಬ್ಬಸ ಹೆಚ್ಚಾದಾಗ ನೀನು ರಾಣಿ ತರಹ ಕೂತಿರು" ಎಂದೆ, ಅಣಕಿನ ಮಾತಿಗೆ ಮರುತ್ತರವನ್ನು ಅದೇ ಧಾಟಿಯಲ್ಲಿ ಕೊಡುತ್ತಾ.

"ಕೂಲಿಯಾಳಿಗೆ ತಿಂಗಳಿಗೆ ಇಷ್ಟು ಅಂತ ಕೊಡಬೇಕಲ್ಲಾ! ಅಷ್ಟು ಶ್ರೀಮಂತರಲ್ಲವಲ್ಲ ನಿಮ್ಮ ಹಾಗೆ ನಾವು" ಎಂದು ಉಸಿರೆಳೆದಳು.

"ಅಯ್ಯೋ! ಇದೇನು ಕಷ್ಟವೇ ತಾಯಿ! ಪರಿಹಾರ ಸುಲಭ! ನಿನ್ನ ಗಂಡನಿಗೆ ಹೇಳ್ತೀನಿ. ಅಯ್ಯಾ! ಇನ್ನೊಂದು ಮದುವೆಯಾಗು. ಹಳ್ಳಿ ಹುಡಗೀನ ಕಟ್ಟು ಮುಸ್ತಾದ ಹುಡುಗೀನ ಕಟ್ಟಿಕೋ. ಅವಳು ಮನೆ ಕೆಲಸ ಎಲ್ಲಾ ಮಾಡಿಕೋತಾಳೆ. ಬಹಳ ಸುಲಭದ ಕೂಲಿಯಲ್ಲೇ ಕೆಲಸ ಸಾಗುತ್ತೆ," ಎಂದು ಕುಹಕವಾಡಿದೆ, ನಸು ನಗುತ್ತಾ.

ತಕ್ಷಣ ಅವಳ ಮುಖ ಬಿಳುಪೇರಿತು. ಕಣ್ಣು ತುಂಬಿದಂತಾಯಿತು. ನನ್ನ ಮುಖವನ್ನೇ ಆ ಚಲುವೆ ನೋಡುತ್ತಾ ಮೆಲ್ಲಗೆ ಹೇಳಿದಳು. "ಆರು ತಿಂಗಳ ಹಿಂದೆ ಅದೂ ಆಯಿತು ಡಾಕ್ಟರೇ!" ಎಂದು.

ಆಕೆಯ ಮುಖ ನೋಡಲಾರದೆ ದೃಷ್ಟಿಯನ್ನು ಗಂಡನ ಕಡೆಗೆ ತಿರುಗಿಸಿದೆ ನಿರಾಕಾರ ನಿರಾಮಯ ನಿರಂಜನ ನಿರ್ವಾಣದಂತೆ ಅವ ಕಂಡ.

ಯಾಕಾರೂ ಈ ಮಾತಾಡಿದೆ. ನನ್ನ ನಾಲಿಗೆ ಮೇಲೆ ಯಾವ ದೋಷ ಕೂತಿತ್ತು? ಸವತಿ ಸಂಕಟವನ್ನು ಉಬ್ಬಸದ ಜತೆಗೆ ಅನುಭವಿಸುತ್ತಿರುವ ಈ ಪುಟ್ಟ ಹೆಣ್ಣು ಮಗಳನ್ನು ಯಾಕಾದರೂ ಹೀಗೆ ನೋಯಿಸಿದೆ?

ಆಗನ್ನಿಸಿತು ನೋಡು, ಭೂಮಿ ಬಿರುಕು ಬಿಟ್ಟಿದ್ದರೆ ಪಾತಾಳಕ್ಕೆ ಹೋಗಿ ಮುಖ ಮರೆಸಿಕೊಂಡು ಬಿಡೋದು ವಾಸಿ ಅಂತ.

ನೀನಾದರೆ ಏನು ಮಾಡುತ್ತಿದ್ದೆ ಎಂದು ಕೇಳುತ್ತಾ, ಮೂರಂಗುಲ ದೂರ ದಲ್ಲಿದ್ದ ಚಿಟಿಕಿ ನಶ್ಯವನ್ನು ಮೂಗಿಗೆ ಡಾಕ್ಟರು ಏರಿಸೇಬಿಟ್ಟರು ಸೀನುಗಳ ಸರಪಣಿ ಯಲ್ಲಿ ಅವರ ಕಣ್ಣು ಕೆರೆ ತುಂಬಿದ್ದು ಆಶ್ಚರ್ಯವೇನಲ್ಲ?

ಆದರೆ ಉತ್ತರ ಹೇಳಲು ಹೋದ ನನಗೆ ಗಂಟಲಲ್ಲಿ ಏನೋ ಬರುತ್ತಿತ್ತು. ಕಣ್ಣು ಮಂಜು ಮಂಜಾಗಿತ್ತು. ರೆಪ್ಪೆ ಹಾರಿಸಿ ಸರಿಮಾಡಿಕೊಂಡು, ಹುಟ್ಟಿದ ಹಬ್ಬಕ್ಕೆ ವಜ್ರದ ಓಲೇನ ಸಾಲಮಾಡಿ ತಂದು ಹೆಂಡತಿಗೆ ಕೊಟ್ಟಾಗ, ಆಕೆ ಪಾಪಾಸಿ ನಲ್ಲಿ ಗಂಡನ ಮುಖಕ್ಕೆ ಎರಡು ಬಾರಿಸಿ, ಓಲೆ ತಂದವರು ಮೂಗುಬಟ್ಟು ತರುಕ್ಕೆ ಗೊತ್ತಾಗಲಿಲ್ವೇ ಎಂದರೆ ಗಂಡನ ಮುಖ ಹೇಗೆ ಆಗುತ್ತೆ, ಹಾಗೆ ಮುಖಮಾಡಿ ಕೊಂಡು ನಿನ್ನ ತರಹಾನೇ ನಾನೂ ಆಗ್ತಿದ್ದೆ ಎಂದೆ. ನಶ್ಯ ಏರಿಸಿದೆ.

—ಕುಮಾರ್.

ಅಮೆರಿಕಾದ ಬಾತುಕೋಳಿಯೊಂದು ಮಂಗಳೂರಿನ ಬಳಿ ಸಿಕ್ಕಿದೆಯಂದೆ.

—ಈಗ ರಷ್ಯನ್ನರ ಸರದಿ! ಅವರು ಯಾವ ಪಕ್ಷೀನ ಮಂಗಳೂರಿಗೆ ಕಳಿಸು ತ್ತಾರೋ ನೋಡಬೇಕು.

* * * *

ಒರಿಸ್ಸಾದಲ್ಲಿ ಮಾಜಿ ಸಚಿವರನ್ನು ಮಾಜಿ ಮುಖ್ಯ ಸಚಿವರು ಬಹಿರಂಗವಾಗಿ ತದುಕಿದರಂತೆ.

—ಮಾಜಿಯಾದರೂ ಮೈಮರೆಯೋದು ತಪ್ಪಲಿಲ್ಲವಲ್ಲ!

* * * *

ಸಿನಿಮಾ ತಾರೆಯರ ಮನೆಗಳನ್ನು ಜಪ್ತಿಮಾಡಿದಾಗ ಮೂವತ್ತು ಲಕ್ಷದಷ್ಟು ವಿದೇಶಿ ಮತ್ತು ಸ್ವದೇಶಿ ಹಣ ಸಿಕ್ಕಿತಂತೆ.

—ಇದನ್ನೇ ಕಥಾವಸ್ತುವನ್ನಾಗಿ ಮಾಡಿಕೊಂಡು ಹೊಸಚಿತ್ರವನ್ನು ರಚಿಸುವ ಏರ್ಪಾಡಾಗಿದೆಯಂತೆ.

* * * *

ಸಿ—ನಾಟ್ ಮತ್ತು ಜ್ಯೋತಿಷ್ಯ

ಸ್ವಿಟ್ಸರ್‌ಲೆಂಡಿನ ವಿಜ್ಞಾನಿಗಳ ತಂಡವೊಂದು ಸಿ-ನಾಟ್ ಎನ್ನುವ ಮೂಲ ಕಣವೊಂದನ್ನು ಕಂಡುಹಿಡಿದ ಕೋಲಾಹಲಕಾರೀ ವಾರ್ತೆಯನ್ನು ಕೇಳಿ ನೆತ್ತಿ ತಂಪಾಯಿತೆಂದು ಹೇಳುವ ಸ್ಥಿತಿಯಲ್ಲಿ ನಾವಿಲ್ಲ. ಈ ವಾರ್ತೆಯು ನಮಗಿದ್ದ ಅಲ್ಪ ಸ್ವಲ್ಪ ತಿಳುವಳಿಕೆಯೆನ್ನುವುದು ಬುಡಮೇಲಾಯ್ತು. ಸಿ-ನಾಟ್ ಎನ್ನುವುದು ತೊಂಬತ್ತೆರಡನೆಯ ಮೂಲಕಣ. ಉಳಿದ ತೊಂಬತ್ತೊಂದು ಮೂಲಕಣಗಳು ಯಾವುವೆಂದು ನಮಗೆ ತಿಳಿದಿಲ್ಲ.

ಈ ನಡುವೆ ಜಯಂತ ನಾರ್ಲಿಕರ್ ಎಂಬ ಭಾರತೀಯ ವಿಜ್ಞಾನಿಗಳೊಬ್ಬರು ಹಾಯ್ಲ್ ಎನ್ನುವ ಮತ್ತೊಬ್ಬರೊಡನೆ ಸೇರಿಕೊಂಡು ಗುರುತ್ವಾಕರ್ಷಣದ ಬಗೆಗೆ ಹೊಸದೊಂದು ಸಿದ್ಧಾಂತವನ್ನು ಕಂಡುಹಿಡಿದಿದ್ದಾರೆ. ಈ ಹೊಸ ಸಿದ್ಧಾಂತ ಯಾವುದು, ಏನು, ಏಕೆ ಎಂಬುದು ತಿಳಿಯಲು ಇನ್ನೂ ಎರಡು ವರ್ಷಗಳು ಬೇಕಂತೆ. ಈ ಸಿದ್ಧಾಂತವನ್ನು ಅಲ್ಲಗಳೆಯಲು ಅಥವಾ ಪುಷ್ಟೀಕರಿಸಲು ಯಾವ ಪ್ರಯೋಗಗಳೂ ಸದ್ಯಕ್ಕೆ ಅಸಾಧ್ಯವಂತೆ.

ಸಿ-ನಾಟ್ ವಿಷಯವೂ ಅಷ್ಟೇ. ಅದರ ಜೀವನಾವಧಿ ಸೆಕೆಂಡಿನ ಟ್ರಿಲಿಯನ್ನಿನಲ್ಲಿ ಒಂದಂಶ. ಇದನ್ನು ಪುಷ್ಟೀಕರಿಸುವ ಅಥವಾ ಅಲ್ಲಗಳೆಯುವ ಯಾವ ಗಡಿಯಾರಗಳೂ ಇಲ್ಲ (ನಮ್ಮಲ್ಲಂತೂ ಇಲ್ಲ.)

ಮೈಸೂರಿನ ವಿಜ್ಞಾನಿಗಳೊಬ್ಬರು ತಮ್ಮ ಆಪ್ತಮಿತ್ರನಾದ ನನ್ನನ್ನು ಹೀಗೆಂದು ಕೇಳಿದರು.

"ಸಿ-ನಾಟನ್ನು ಅವರು ಹೇಗೆ ಕಂಡುಹಿಡಿದಿದ್ದಾರು?"

ನಾನು ಹೇಳಿದೆ, "ಅದು ಬಹಳ ಸುಲಭ."

"ನಿನಗೇನು ಗೊತ್ತು?"

. "ನನ್ನ ಮಿತ್ರನೊಬ್ಬ ಒಂದು ಪ್ರಯೋಗ ಸಾಧನವನ್ನು ಕಂಡುಹಿಡಿದಿದ್ದಾನೆ."

"ಯಾವ ಸಾಧನ? ವೋ ಕೌನ್ ಥೀ ಯಲ್ಲಿ...."

"ಅದರ ಹೆಸರು ಬಬಲ್ ಛೇಂಬರ್...."

"ನಮ್ಮ ಮಾವ ನನ್ನನ್ನು ಮಿನಿಸ್ಟರ್ಸ್ ಛೇಂಬರಿಗೆ ಕರೆದುಕೊಂಡು ಹೋಗುತ್ತಾನೆ. ನನಗೆ ಪ್ರಮೋಷನ್...."

"ಆ ಬಬಲ್ ಛೇಂಬರಿನಲ್ಲಿ ಒಂದು ಫೋಟೋ ಫಿಲ್ಮ್ ಇಟ್ಟು, ಕೈಕಟ್ಟಿ ಕುಳಿತುಬಿಟ್ಟರಾಯ್ತು. ಅದರಲ್ಲಿ ಈ Fundamental Particles ಫೋಟೋ

ಗಳೆಲ್ಲಾ ನಂಬರ್ ಸಮೇತ ಬಿದ್ದಿರುತ್ತವೆ. ಈ ಸಿ–ನಾಟಿನ ಕೆಳಗೆ 92 ಅಂತ ಬಿದ್ದಿತ್ತಂತೆ."

"ನಮಗೆಲ್ಲಾ ಯಾಕಿದ್ದೀತು ಬಾರಯ್ಯಾ, ಕಾಫಿ ಕುಡಿಯೋಣ."

ನಮ್ಮೆಲ್ಲರ ಅಭಿಪ್ರಾಯವೂ ಅದೇ ಆದರೆ ವಿಜ್ಞಾನಿಯೆನ್ನಿಸಿಕೊಂಡವನು ಅದನ್ನು ಹೊಂದಿರುವುದಾದರೆ ಏನು ಬಂದಹಾಗಾಯಿತು? ಏನಾದರೂ ಬರಲಿ ಬಿಡಲಿ, ನನ್ನ ಮಿತ್ರನ ಹೆಸರು ಇಷ್ಟರಲ್ಲೇ ಅವನ ಫೋಟೋ ಕೆಳಗೆ ಪೇಪರು ಗಳಲ್ಲೆಲ್ಲಾ ಬರುತ್ತದೆ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಶ್ರೀಯುತರು ಪರದೇಶಕ್ಕೆ ಪಾದ ಬೆಳೆಸಿದರು ಎಂಬ ವರ್ತಮಾನವೂ ಅವರ ಹಸರಿನಡಿಯಲ್ಲಿರುತ್ತದೆ. ಬಂದ ಮೇಲೆ ಅವರು ಕ್ರಮೇಣ ರೀಡರ್ ಪ್ರೊಫೆಸರ್ ಆಗುತ್ತಾರೆ ಅದಕ್ಕೆಲ್ಲಾ ಅವರ ದೆಶೆಯೇ ಕಾರಣವೆಂಬುದನ್ನು ನಾವು ಬಲ್ಲೆವು ಆದರೆ ತಲೆ ತಿರುಗಿದ ಅವರು ಅದನ್ನು ಒಪ್ಪಿಕೊಳ್ಳುವುದಿಲ್ಲ. ನಾನು ಜ್ಞಾನಾರ್ಜನೆ ಮಾಡಿದೆ. ಗ್ರಹಗಳೇನು ಮಾಡಿಯಾವು ಎಂದು ಹೂಂಕರಿಸುತ್ತಾರೆ ಈ ಕಾಲದಲ್ಲಿ ಅವರ ಮಾತಿಗೇ ಬೆಲೆ. ನಮ್ಮ ಮಾತಿಗೆ ಇಲ್ಲ. ನಾವು ಸಾಧನಾ ವಿಷಯವನ್ನರಿಯೆವು ಮಿನಿಸ್ಟರ್ಸ್ ಛೇಂಬರಿಗೂ ನಮಗೂ ದೂರ, ವಿದೇಶಕ್ಕೆ ಹೋದ ವಿಲಾಯತೀ ಪ್ರಾಣಿಗಳು ನಾವಲ್ಲ. ಬಾ ಎಂದರೆ ಬೆಲೆ ಬರುವುದಾದರೂ ಹೇಗೆ?

ಬೆಲೆಯಿಲ್ಲದಿದ್ದರೂ ಈ ಮಾತನ್ನು ಬರೆಯುವುದಕ್ಕೇನು ಕಾರಣವೆಂದು ಕೇಳಿದರೆ, ಮೇಷದಲ್ಲಿ ರವಿ ಉಚ್ಚನಾಗಿದ್ದಾನೆ ಎಂದೇ ಹೇಳಬೇಕಾಗುತ್ತದೆ. ಮಿನಿ ಸ್ಟರ್ಸ್ ಛೇಂಬರ್ ದಾರಿ ನಿನಗೇಕೆ ಬಂದಾಗಿದೆ ಎಂದರೆ, ಲಗ್ನದಿಂದ ನಾಲ್ಕನೆಯ ಮನೆಯಲ್ಲಿ ರಾಹು ಇದ್ದಾನೆ. ಜಗಳಗಂಟತನ, ಶೀಘ್ರಕೋಪ, ಹೇರಳ ಹೊಡಪ್ಪ ತನ ಶೂನ್ಯ. ಛೇಂಬರುಗಳ ಬಾಗಿಲುಗಳೆಲ್ಲಾ ಬಂದ್.

ಈ ಮಾತನ್ನು ನನ್ನ ವಿಜ್ಞಾನಿ ಮಿತ್ರ ತೀವ್ರವಾಗಿ ವಿರೋಧಿಸುತ್ತಾನೆ ಜ್ಯೋತಿಷ್ಯವೊಂದು ಮೂಢ ನಂಬಿಕೆಯೆನ್ನುತ್ತಾನೆ. ವಿಜ್ಞಾನವು ತರ್ಕಬದ್ಧ ವಿಚಾರ ಸರಣಿ, ಪ್ರಾಯೋಗಿಕ ಬೆಂಬಲ ಇತ್ಯಾದಿಗಳನ್ನು ಪಡೆದಿದೆಯಂತೆ ಆದುದ ರಿಂದಲೇ ಅವರು ಯಾರೋ ಕಂಡುಹಿಡಿದರೆಂದು ಹೇಳಲಾದ ಸಿ–ನಾಟನ್ನು ನಂಬಿದ ರಲ್ಲವೇ! ಅದು ಇದೆಯೇ ಇಲ್ಲವೇ ಎಂದು ಖಚಿತಪಡಿಸಿಕೊಳ್ಳದೆ ಜ್ಯೋತಿಷಿಗಳನ್ನು ಅಪಹಾಸ್ಯಕ್ಕೆ ಗುರಿಪಡಿಸುತ್ತಿರುವರಲ್ಲವೇ!

ಜ್ಯೋತಿಷ್ಯವೊಂದು ವಿಜ್ಞಾನವೆಂದು ಜ್ಯೋತಿಷಿಗಳು ಹೇಳಲೇಬಾರದಾಗಿತ್ತು. ಭಾರತದ ವಿಶೇಷತಃ ಮೈಸೂರಿನ ವಿಜ್ಞಾನಿಗಳಂತೆ ತೆರಿಗೆದಾರರ ತಲೆಭಾರವಾಗಿರದ ಜ್ಯೋತಿಷಿಗಳು.

"ತಮ್ಮಗಳಿರಾ, ಜ್ಯೋತಿಷ್ಯವನ್ನು ಕಲಿಯಿರಿ. ಇದರಿಂದ ಬಾಳುವೆಯನ್ನು ಹಸನುಗೊಳಿಸಬಹುದಾದ ಕೆಲವೊಂದು ಅಂಶಗಳನ್ನು ಅರಿಯಬಹುದು" ಎಂದೇ ಹೇಳಬೇಕಾಗಿತ್ತು. ಆದರೆ ವಿಜ್ಞಾನದ ಲೇಬಲ್ ಇರುವುದೊಂದು ಭೂಷಣವೆಂದು

ಜ್ಯೋತಿಷಿಗಳೂ ಭಾವಿಸಿದರು. ಜ್ಯೋತಿಷ್ಯದ ಜಾತಕದಲ್ಲಿ ಕೆಲವೊಂದು ತಪ್ಪು ಲೆಕ್ಕಾಚಾರಗಳನ್ನು ಮಾಡಿದುದೇ ಇದಕ್ಕೆ ಕಾರಣವಿರಬೇಕು.

ತೊಂಬತ್ತೆರಡು ಮೂಲಕಣಗಳು ಇರುವುದಾದರೂ ಹೇಗೆ? ಎಂಬುದು ನನಗೆ ಬರುವ ಮೊದಲ ಪ್ರಶ್ನೆ. ಮೂಲಕಣ ಒಂದೇ ಇರಬೇಕು. ಅದರಿಂದಾದ ಕಣಗಳು ಅನಂತವಾಗಿರಬಹುದು.

ಈಗ ಸದ್ಯದಲ್ಲಿ ವಿಜ್ಞಾನದ ಅಭ್ಯಾಸ ನಡೆಯುತ್ತಿರುವುದು ಕೀರ್ತಿ, ಹಣಗಳೆರಡರ ಗಳಿಕೆಗಾಗಿ ತಾನೆ. ಆಡುವ ಆಟಗಳನ್ನೆಲ್ಲಾ ಆಡಿ "ನಾನೇನೋ ಜ್ಞಾನಸಂಪಾದನೆಗಾಗಿ ಇದನ್ನೆಲ್ಲಾ ಮಾಡಿದೆ ಹೀಗೆಲ್ಲಾ ಆಗುತ್ತದೆಯೆಂದು ನನಗೆ ಗೊತ್ತಿರಲಿಲ್ಲ." ಎಂದುಬಿಟ್ಟರೆ ಆಗಿಹೋಯಿತು.

ವಿಜ್ಞಾನ ಇಷ್ಟೆಲ್ಲಾ ಮುಂದುವರಿದರೂ, ಜಗತ್ತಿನ ಕಷ್ಟ ಎಂದಿಗಿಂತಲೂ ಸಾವಿರಪಾಲು ಹೆಚ್ಚಾಗಿದೆಯಲ್ಲಾ. ರಾಜಶಾಹೀ ಕೆಟ್ಟದೆಂದು ಪ್ರಜಾಪ್ರಭುತ್ವವನ್ನೂ, ಬಂಡವಳ ಶಾಹೀ ಕೆಟ್ಟದೆಂದು ಕಮ್ಯೂನಿಸಮ್ಮನ್ನೂ, ನೆಚ್ಚಿದ ಹಾಗಾಯ್ತು.

ಜ್ಯೋತಿಷ್ಯ ಹಾಗಲ್ಲ. ಶುಕ್ರ ಅಸ್ತನಾದುದರಿಂದ ನಿನಗೆ ಭೂಮಿಯೇ ಹಾಸಿಗೆ, ತೋಳೇ ತಲೆದಿಂಬು ಕುಜ ಅಷ್ಟಮದಲ್ಲಿದ್ದು ಕುಜದೆಸೆ ನಡೆಯುತ್ತಿರುವುದರಿಂದ ನೀನು ಈಗ ಹೇಗೋ ಇನ್ನೂ ಏಳು ವರ್ಷ ಹಾಗೇ ಎಂದು ಅದು ಹೇಳಿದುದನ್ನು ಕೇಳಿ ನನಗೆ ಮನಸ್ಸು ಹಗುರವಾಗಿದೆ. ಕೇತು ದಶಮ ಕೇಂದ್ರದಲ್ಲಿದ್ದರೂ ಕೆಲವೊಂದು ಕಾರಣಗಳಿಂದ ನಿನಗೆ ಮೋಕ್ಷವಿಲ್ಲ. ಮೋಕ್ಷ ಸಂಬಂಧವಾದ ಗ್ರಂಥವನ್ನು ಓದುತ್ತೀ ಅಷ್ಟೇ ಎಂದು ಜ್ಯೋತಿಷ್ಯ ಹೇಳಿದುದರಿಂದ ಆ ಒಂದು ಹಂಬಲವೂ ಇಲ್ಲವಾಯ್ತು.

"ನಿನಗೆ ಇನ್ನು ಎರಡೂವರೆ ವರ್ಷಕ್ಕೆ ಸಾಡೇಸಾತು ಆರಂಭವಾಗುತ್ತದೆ" ಎಂದರು ಜ್ಯೋತಿಷಿಗಳು

"ಹಾಗೇನು ಮತ್ತೆ ಈಗ ಇರುವುದೇನು? ಸಾಡೇಸಾತು ಇನ್ನಾದರೂ ಕೊನೆಗೊಳ್ಳುವುದೆಂದಿದ್ದೆನಲ್ಲಾ?" ಎಂದೆ.

"ಆದರೂ ನಿನಗೆ ಸಾಡೇಸಾತು ಕಾಡುವುದಿಲ್ಲ ಗುರುಕೃಪೆಯಿದೆ" ಎಂದರು.

ಹೀಗೆ ಧೈರ್ಯ ಹೇಳಬಲ್ಲ ವಿಜ್ಞಾನಿ ಇರುವನೋ.

"ಅಯ್ಯೋ, ಈಗ ನಾನು ಸಿ–ನಾಟ್ ಕಂಡುಹಿಡಿದೆ. ನಿನ್ನ ಹಣೇ ಬರಹ. ಅದು ವರವೋ ಶಾಪವೋ ಕಟ್ಟಿಕೊಂಡು ನನಗೇನು? ಅಣುಯುದ್ಧ ನಡೆಯದೆ ನಾನೂ ನೀನೂ ಬದುಕಿದ್ದರೆ ತೊಂಬತ್ತು ಮೂರನೆಯ ಮೂಲಕಣ ಕಂಡುಹಿಡಿಯಲು ಯತ್ನಿಸುತ್ತೇನೆ." ಎಂದರೆ ಅವನಂಥಾ ದೇವತಾ ಮನುಜನಾದ ವಿಜ್ಞಾನಿ ಸಿಕ್ಕುದು ನಮ್ಮ ಪುಣ್ಯ ಎನ್ನಬೇಕು.

—ಅ. ರಾ. ಸೇ

"ಟಾಂಕಿನ್ ಬೆ"

ಕಾಂಪೌಂಡಿನ ತುಂಬಾ ಹೆಗ್ಗಣಗಳು ದೊಗರೆ ಕೊರೆದು ಸೇರಿಕೊಂಡು ಬಿಟ್ಟಿವೆ, ನಮ್ಮ ಮನೆಯಲ್ಲಿ. ಯಾವ ತರಕಾರಿ ಗಿಡ ಹಾಕಲಿ ಬೇರು ಕಚ್ಚಿ ಮುಗಿಸಿಬಿಡುತ್ತವೆ. ರಾತ್ರಿಯೆಲ್ಲಾ ಹೆಗ್ಗಣದ ಶಿಕಾರಿ ಯಾರು ಮಾಡುಕ್ಕಾಗುತ್ತೆ? ತರಕಾರಿ ಬೆಳೆಯೋದನ್ನೇ ಬಿಟ್ಟೆವು.

ಅಷ್ಟಕ್ಕೆ ನಮ್ಮ ಕಷ್ಟ ಮುಗಿಯಿತು ಅಂತೀರಾ? ಇಲ್ಲ.

ಒಂದೆರಡು ಹೆಗ್ಗಣಗಳು ಮನೆ ಎದುರಿನ ರಸ್ತೆದಾಟಿ ಎದುರುಮನೆ ಕಾಂಪೌಂಡಿಗೆ ಹೋಗಿ ಗಲಭೆ ಎಬ್ಬಿಸಲು ಶುರು ಮಾಡಿದವು ಎದುರು ಮನೆಯೋರು ಏನು ಮಾಡಿದರು ಗೊತ್ತೆ. ತೋಳದಂತಹ ಎರಡು ನಾಯಿಗಳನ್ನು ಸಾಕಿದರು. ರಾತ್ರಿಯೆಲ್ಲಾ ನಾಯಿ ಹೆಗ್ಗಣದ ಸಮರ. ಗಲಾಟೆಯೋ ಗಲಾಟೆ. ನಮಗೂ ನಿದ್ರೆ ಬರಲಿಲ್ಲ. ಎದುರು ಮನೆಯವರಿಗೆ ನಿದ್ದೆ ಬಂದ ಹಾಗೆ ಕಾಣಲಿಲ್ಲ. ದೀಪ ಹಚ್ಚಿಕೊಂಡು, ಬ್ರೂಟಸ್ ಬ್ರೂಟಸ್ ಷಟ್ ಅಪ್ ಷಟ್ ಅಪ್ ಎಂದು ಪಲ್ಲವಿ ಹಾಡ್ತಾ ಇದ್ದರು.

ಇಷ್ಟಕ್ಕೇ ಮುಗಿಯಿತು ಅಂತೀರಾ? ಇಲ್ಲ.

ಎದುರು ಮನೆಯವರು ನಮ್ಮನೆ ಕಾಂಪೌಂಡಿನಿಂದ ಹೆಗ್ಗಣಗಳು ಬರುತ್ತೆ ಎಂದು ಕಂಡು ಹಿಡಿದರು. ನಮ್ಮ ಮನೇಲಿ ತರಕಾರಿ ತೋಟ ಇಲ್ಲ ಅವರ ಮನೇಲಿ ಇದೆ. "ಹೊಟ್ಟೆ ಕಿಚ್ಚಿಗೆ ನಮ್ಮನೆ ಹೆಗ್ಗಣಗಳನ್ನು ಬೇಕೂ ಅಂತ ಅಲ್ಲಿಗೆ ಓಡಿಸುತ್ತೀವೆ" ಎಂದು ಶಂಕೆ ಪಟ್ಟರು. ತೊಗೊ! ಆ ಶಂಕೆಯ ಆಧಾರದಮೇಲೆ ನಮ್ಮ ಮನೆ ಕಾಂಪೌಂಡಿನ ಮೇಲೆ ರಾತ್ರಿಯಲ್ಲಿ ಅವರ ನಾಯಿಗಳನ್ನು ಬಿಟ್ಟು ಹಲ್ಲೆ ಮಾಡಿದರು.

ನಾವು ಲಬೋ ಲಬೋ ಮಾಡಿದೆವು. ಪೋಲೀಸರಿಗೆ ದೂರಿತ್ತೆವು.

* * * *

ಯಾಕೆ ಹೇಳುಕ್ಕೆ ಬಂದೆ ಅಂದರೆ, ಟಾಂಕಿನ್ ಬೆ ಅಲ್ಲಿ ಅಮೆರಿಕನ್ ರಾಕ್ಷಸ ಸಮರ ನೌಕೆಗಳ ಮೇಲೆ, ವಿಯಟ್ನಾಂನ ಪುಟಾಣಿ ದೋಣಿಗಳು ಹಲ್ಲೆ ನಡೆಸಿತು ಎಂದು ಅಮೆರಿಕನ್ನರು ವಿಯಟ್ನಾಂ ತೀರದ ಪಟ್ಟಣಗಳ ಮೇಲೆ ತಮ್ಮ ಬಾಂಬರುಗಳನ್ನು ಛೂಬಿಟ್ಟರು.

ನಮ್ಮ ಮನೆ ತರಹಾನೇ ಅಲ್ಲೂ ಆಗಿರಬಹುದೇ?

—ಪ್ರಸಾದ್

ಚೌತಿಯ ಕನಸು

ವರ್ಷೇ ವರ್ಷೇ ನಡೆಯುವಂತೆ ಅವತ್ತು ಗಣಪನನ್ನು ಕೂರಿಸಿ ಚೌತಿ ಪೂಜೆ ಮಾಡಿದ್ದಾಯಿತು. ಆದರೆ ಈ ವರ್ಷ ಒಂದೇ ವ್ಯತ್ಯಾಸ. ನೈವೇದ್ಯಕ್ಕೆ ಹತ್ತು ಹಲವು ಪಾತ್ರೆಗಳಲ್ಲಿ ಭಕ್ಷ್ಯ ಭೋಜ್ಯಗಳನ್ನೂ, ತಟ್ಟೆ ಬುಟ್ಟಿಗಳಲ್ಲಿ ಹಣ್ಣು ಹಂಪಲನ್ನೂ ತುಂಬಿ ಮುಂದಿಡುವ ತಾಪತ್ರಯವಿಲ್ಲ. ಈ ಸಲ ಗಣಪತಿಯ ಮುಂದಿಟ್ಟುದು – ಸೊಗಸಾದ ಬೆಳ್ಳಿಯ ತಟ್ಟೆಯಲ್ಲಿ ರಾರಾಜಿಸುತ್ತಿದ್ದುದು ಒಂದು ಬಿಲ್ಲೆ ಗಾತ್ರದ ಮಾತ್ರೆ !

ಪುರೋಹಿತರು ವೇದೋಕ್ತವಾಗಿ ಗಣಪನಿಗೆ ಆತನ ಪ್ರಿಯವಾದ ತಿಂಡಿಗಳನ್ನೆಲ್ಲ ಜ್ಞಾಪಿಸಿಕೊಟ್ಟು, ಅವೆಲ್ಲ ಈ ಮಾತ್ರೆಯಲ್ಲಿ ಅಡಗಿದೆ ಎಂದು ಸಾರಿ, ಮಂತ್ರವನ್ನು ಪರಿಸ್ಥಿತಿಗೆ ತಕ್ಕಹಾಗೆ ತಿದ್ದಿಕೊಂಡು, ತಗೋ ಅಂತ ಅರ್ಪಿಸಿದರು. ಎರಡು ಮಣ ಕರಿಗಡಬು, ಒಂದೂವರೆ ಮಣ ಮೋದಕ ಇತ್ಯಾದಿ ಆ ಮಾತ್ರೆಯಲ್ಲಡಗಿರಬಹುದೆಂದರೆ ಮೊದಲಿಗೆ ಅವರಿಗೆ ನಂಬಿಕೆ ಬಂದಿರಲಿಲ್ಲ. ಅಂದ ಮೇಲೆ ಗಣಪ ಹೇಗೆ ನಂಬಿಯಾನು ?

ಆದ್ದರಿಂದ ನೈವೇದ್ಯ ಸಮರ್ಪಣೆ ನಡೆಯುತ್ತಿದ್ದಂತೆ ನಮ್ಮ ಬುಟ್ಟಿ ಬುಟ್ಟಿ ಸಂಬಳ ತಿಂಬ ಆಹಾರ ವಿಜ್ಞಾನಿಗಳು ಕಂಡುಹಿಡಿದ ಪವಾಡವಾದ ಆ ಮಾತ್ರೆಯನ್ನು ವರ್ಣಿಸಬೇಕಾಯಿತು. ಆ ಮಾತ್ರೆ ಮತ್ತೇನೂ ಆಗಿರದೆ ನಮ್ಮ ವಿಜ್ಞಾನಿಗಳು ಕೊಟ್ಟ ಕೊಡುಗೆ concentrated food ಗುಳಿಗೆಯಾಗಿತ್ತು. ಇಂದಿನ ಬೆಲೆಯೇರಿಕೆಯನ್ನು ಗಮನಿಸಿ ಜನಗಳ ಮೇಲೆ ಕರುಣೆಯಿಟ್ಟು ವಿಜ್ಞಾನಿಗಳು ಕೇವಲ ಒಂದು ಮಾತ್ರೆಯಿಂದ ಹತ್ತೈವತ್ತು ಮಂದಿಯ ಹೊಟ್ಟೆ ಹಸಿವನ್ನು ತಣಿಸುವ ಒಂದು ಉಪಾಯವನ್ನು ಕಂಡುಹಿಡಿದಿದ್ದರು. ಒಂದು ರವೆಯಷ್ಟು ಮಾತ್ರೆಯನ್ನು ತಿಂದರೆ ಒಟ್ಟಾಗಿ ನಾಲ್ಕು ಕರಿಗಡುಬು ತಿಂದ ತೇಗು ಬರುತ್ತದೆಂಬುದಾಗಿ ಪುರೋಹಿತರಿಗೂ ಗಣಪನಿಗೂ ಭರವಸೆ ಕೊಟ್ಟೆ.

ಆದರೆ ಅಷ್ಟರಲ್ಲಿ ಒಂದು ಅಚಾತುರ್ಯ ನಡೆದುಹೋಯಿತು ಅಲ್ಲೇ ಹತ್ತಿರದಲ್ಲಿ ಕುಳಿತಿದ್ದ ನಮ್ಮ ಎರಡು ವರ್ಷದ ಪಿಲ್ಲು ಆ ಮಾತ್ರೆಯಮೇಲೆ ಕಣ್ಣಿಟ್ಟಿದ್ದು ನಮಗೆ ತಿಳಿಯಲೇ ಇಲ್ಲ. ಸರಿ ಅದು ಮಾತ್ರೆಯನ್ನು ತೆಗೆದು ಬಾಯಿಗೆ ತುರುಕಿಕೊಂಡಿದ್ದೇ " ಉಗಿ ಉಗಿ " ಅಂತ ಎಲ್ಲರೂ ಕೂಗಿದ್ದೇ ಕೂಗಿದ್ದು.

ಆದರೆ ಅದು ನುಂಗೇಬಿಟ್ಟಿತು. ಇನ್ನೇನು ಮಾಡೋಣ ಅಂತ ಹಾಹಾಕಾರ. ಅಲ್ಲವೇ ಮತ್ತೆ? ಐವತ್ತು ಮಂದಿ ತಿನ್ನುವ ಆಹಾರ ಆ ಕಿರು ಹೊಟ್ಟೆಯನ್ನು ಹೊಕ್ಕರೆ ಏನು ಗತಿ? ಎಲ್ಲರೂ ಕಕ್ಕಾಬಿಕ್ಕಿ. ಇಷ್ಟರಲ್ಲಿ ಅವಿವೇಕಿಗಳಾರೋ ಒಂದಿಷ್ಟು ನೀರು ಕುಡಿಸಿಬಿಟ್ಟರು. ಪಿಲ್ಟುವಿಗೆ ಮತ್ತೆ ಐದು ನಿಮಿಷಗಳಲ್ಲಿ ನೀರಿಂದ ಮಾತ್ರೆ ಹಿಗ್ಗತೊಡಗಿದಾಗ ಪಿಲ್ಟುಕೂಡ ಬೆಲೂನಿನಂತೆ ಹಿಗ್ಗಿ ಸಿಡಿದು ಚೂರು ಚೂರಾಗಿ ಚೆಲ್ಲಾಪಿಲ್ಲಿಯಾಯಿತು.

ಗೋಳೇ ಗೋಳು. ಬಾಯಿ ಬಡಿಕೊಂಡೆವು ಎಲ್ಲಾ ....ಪಿಲ್ಟು ಹೋಯಿತಲ್ಲಾ ಅಂತ ....

* * * *

"ಇದೇನು ಹಬ್ಬದ ದಿನ ಹೀಗೆ ಬಾಯಿ ಬಡಿಕೊಳ್ಳೋದು" ಎಂದು ಓಡಿ ಬಂದ, ಗಾಬರಿಗೊಂಡ ನನ್ನ ಹೆಂಡತಿ ಬಾಯಿ ಒತ್ತಿ ಹಿಡಿದಿದ್ದಳು ಎಚ್ಚರಗೊಂಡ ನಾನು ಥತ್‌ಥತ್ ಎಂದು ಕಣ್ಣುಜ್ಜಿಕೊಂಡೆ.

ಚೌತಿ ದಿನ ಉಂಡು ಮಲಗಿದರೆ ಇಂಥ ಕೆಟ್ಟ ಕನಸೇ? ಏನೋ ಈಗ ಆಹಾರ ಸಾಮಗ್ರಿಗಳ ಬೆಲೆಯನ್ನು ಗಮನಿಸಿ ನಮ್ಮ ವಿಜ್ಞಾನಿಗಳು ಇಂಥ Concentrat-ed Food ತಯಾರಿಸಿ ಒಂದು ಮಾತ್ರೆ ತಿಂದು ಹೊಟ್ಟೆ ತುಂಬಿತೆನ್ನುವ ಕಾಲ ಬಂದಿದ್ದರೆ ಚೆನ್ನಾಗಿತ್ತೆಂದು ನಾನು ಹಾರ್ದಿಕವಾಗಿ ಬಯಸಿದ್ದುಂಟು. ಆದರೆ ಕನಸಿನಲ್ಲಿ ಹೀಗೆ!

ಪಾಪ ಅಪ್ಪುಚ್ಚುವಿನ ಸ್ಥಿತಿಯಾದಂತೆ ಗಣಪತಿಗೂ ಅಂದಾಜು ತಪ್ಪಿ ಹೆಚ್ಚು ಮಾತ್ರೆಗಳನ್ನು ನುಂಗಿ ಅನಾಹುತವಾದರೆ ಏನು ಗತಿ? ಶಾಪ ಶಾಪ....ಎಂಥ ಶಾಪ ಕೊಟ್ಟಾನು ರೇಗಿದ ಗಣಪ ಎಂಬುದನ್ನು ನೆನೆಸಿಕೊಂಡು ನಗು ಬಂತು?

(ಸ್ಟೀಫನ್ ಲೀಕಾಕನಂತೆ)

—ರಾಮಿ.

ಧಾನ್ಯ ಬೆಲೆ ಏರಿಕೆಯ ವಿರುದ್ಧ ಬೆಂಗಳೂರಿನಲ್ಲಿ ಎರಡು ದೊಡ್ಡ ಮೆರವಣಿಗೆಗಳನ್ನು ಏರ್ಪಡಿಸಿದ್ದರಂತೆ; ಕಮ್ಯೂನಿಸ್ಟರು.

—ಮೆರವಣಿಗೆಯಲ್ಲಿ ಭಾಗವಹಿಸಿದವರಿಗೆಲ್ಲಾ ಅಂದು ಒಪ್ಪತ್ತು ಭರ್ಜರಿ ಊಟವನ್ನು ಪ್ರಕಟಿಸ್ಸಾಗಿ, ಕಮ್ಯೂನಿಸ್ಟ ನಾಯಕರು ಹಾಕಿದರಂತೆ. ಮೆರವಣಿಗೆ ಯಶಸ್ವಿಯಾಯಿತು ಎಂದು ಹೇಳಬೇಕೆ!!

ಕನ್ಯಾರತ್ನ

ಶೌರಿಯ ಇತಿಹಾಸ ಓದಿರುವ ನಿಮಗೆ, ಶೌರಿ ಒಂದು ಬಾರಿ ನಮ್ಮ ನಾಗತ್ತೆ ಯನ್ನು ಒಂದು ವಿಪರೀತ ಸೂಕ್ಷ್ಮವಾದ ಇಕ್ಕಟ್ಟಿನ ಪರಿಸ್ಥಿತಿಯಿಂದ ಪಾರುಮಾಡಿಸಿದ ಪ್ರಸಂಗವನ್ನು ನಿಮಗೆ ತಿಳಿಸಿದ್ದೇನೆಯೋ ಇಲ್ಲವೋ — ನನಗೆ ನೆನಪಿಲ್ಲ. ಪ್ರಾಯಶಃ ತಿಳಿಸಿಲ್ಲ.

ನಾಗತ್ತೆಗೂ ಶೌರಿಗೂ ಸ್ವಲ್ಪ ಅಷ್ಟಕ್ಕಷ್ಟೆ ಅನ್ನುವ ವಿಚಾರ ಪ್ರಾಯಶಃ ನೀವು ಊಹಿಸಿರಬಹುದು. ಶೌರಿಯ ವಿಚಾರದಲ್ಲಿ ನಾಗತ್ತೆ, ನಮ್ಮ ಹೆಬ್ಬೂರಿನ ಭಾಗೀರತೀ ಚಿಕ್ಕಮ್ಮನಷ್ಟು ಧಾರಾಳಿಗಳಲ್ಲ. ವಿಪರೀತ ಮಡಿವಂತರು ಭಾಗೀರತೀ ಚಿಕ್ಕಮ್ಮ— ಪ್ರಜಾಪ್ರಭುತ್ವವಾದಿಗಳು. ನಾಗತ್ತೆ—ನಿರಂಕುಶ ಪ್ರಭುತ್ವವಾದಿಗಳು. ಭಾಗೀರತೀ ಚಿಕ್ಕಮ್ಮ—ಸಮಾಜವಾದಿಗಳು ನಾಗತ್ತೆ—ಬಂಡವಾಳ ಶಾಹೀವಾದಿಗಳು. ಭಾಗೀರತೀ ಚಿಕ್ಕಮ್ಮ ಸ್ವಲ್ಪ ವಾಮಪಕ್ಷೀಯರು. ನಾಗತ್ತೆ—ಸಂಪೂರ್ಣ ಬಲಪಕ್ಷೀಯರು ಭಾಗೀರತೀ ಚಿಕ್ಕಮ್ಮ—ದಸರಾದಲ್ಲಿ ಜಂಬೂಸವಾರಿಯನ್ನು ನೋಡಿದರೂ ಆಯ್ತು— ಇಲ್ಲದಿದ್ದರೂ ಆಯ್ತು ಅನ್ನುವವರು ನಾಗತ್ತೆಗೆ—ಜಂಬೂಸವಾರಿ ಅಂದರೆ — ಅದೊಂದು ವ್ರತವಿದ್ದ ಹಾಗೆ. ದೇವರ ದರ್ಶನವಿದ್ದ ಹಾಗೆ. ಹಾಗಾಗಿ, ನಾಗತ್ತೆಯ ಎದುರಿನಲ್ಲಿ ಶೌರಿಯ ಸ್ಥಾನ ಸ್ವಲ್ಪ ಸಡಿಲವೇ ಎನ್ನಬಹುದು.

ಒಂದು ಬಾರಿ ನಾಗತ್ತೆ, ದಸರಾಕ್ಕೆ ಅಂತ ಮೈಸೂರಿಗೆ ಬಂದಿದ್ದರು. ಚಾಮರಾಜಪುರದಲ್ಲಿ ತಮ್ಮ ಸ್ವಂತ ಬಂಗಲೆಯ ಅರ್ಧ ಭಾಗ ಬಿಡಿಸಿಕೊಂಡಿದ್ದರು. ದಸರಾ ಸಮಯ — ಮೈಸೂರಿನಲ್ಲಿ ವಿಪರೀಪ ಜನಸಂದಣಿ ಇದ್ದರೂ ಸಹ, ನಾಗತ್ತೆ ಮೈಸೂರಲ್ಲಿದ್ದುದರಿಂದ ನನ್ನ ಹುಷಾರಿನಲ್ಲಿ ನಾನಿದ್ದೆ. ಏಕೆ ಅಂದರೆ, ಹುಲ್ಲಿನ ಮೆದೆಯಲ್ಲಿ ಅಡಗಿದ್ದ ಒಂದು ಸೂಜಿ ಯಾರ ಕಣ್ಣಿಗಾದರೂ ಬೀಳಬೇಕಾದರೆ, ಅದು ನಾಗತ್ತೆಯ ಕಣ್ಣಿಗೇ !

ಒಂದು ದಿನ ಬೆಳಿಗ್ಗೆ ನಾಗತ್ತೆಯಿಂದ ನನಗೆ ಕರೆಬಂತು ಬಂಗಲೆಗೆ ತುಸು ಎಚ್ಚರಿಕೆಯಿಂದಲೇ ಹೋದೆ. ವರಾಂಡದಲ್ಲೇ ಶಿಂಗ್ರುವಿನ ಭೇಟಿಯಾಯ್ತು. ಈ ಅಪಶಕುನಕ್ಕೆ ಅವನನ್ನು ಶಪಿಸಿ, ಮನೆಯೊಳಕ್ಕೆ ನುಗ್ಗಿದೆ. ಹಾಲಿನಲ್ಲಿ ನಾಗತ್ತೆ ಬೆಳಗ್ಗಿನ ಉಪಹಾರ ಸೇವಿಸುತ್ತ ಆರಾಮವಾಗಿ ಕುಳಿತಿದ್ದರು ಜೊತೆಗೆ ಒಂದು

ಜೊತೆ ಹೊಸ ಅತಿಥಿಗಳೂ ಇದ್ದರು ಒಬ್ಬ ಹುಡುಗಿ ಸುಮಾರು ಇಪ್ಪತ್ತು ವಯಸ್ಸು. ಒಬ್ಬ ಗಂಡಸು ಸುಮಾರು ಮೂವತ್ತು ವಯಸ್ಸು—ಅವರೂ ಉಪಹಾರ ಸೇವಿಸುತ್ತ ಇದ್ದರು.

" ಓಹೋ ಹರಿ ಬಂದೆಯಾ ? ಇವನೇ ನಮ್ಮ ಯಜಮಾನರ ಸೋದರಳಿಯ ಹರಿ ಮಾಧವ ಪಾಂಡು. ಹರಿ, ಇವರು ಹುಬ್ಬಳ್ಳಿ ಸಂಜೀವ ಮನೀಹಾಳ್ ಅವರ ಮಕ್ಕಳು ಕನ್ನಯ್ಯ ಮತ್ತು ಕುಸುಮ. ಅಣ್ಣ ತಂಗಿ ಇಬ್ಬರೂ ದಸರಾಕ್ಕೆ ಅಂತ ಬಂದಿದ್ದಾರೆ ನಿನ್ನೆ ತಾನೆ ಬಂದವರು ರಾತ್ರಿ ಎಕ್ಸಿಬಿಷನ್‌ನಲ್ಲಿ ಮಳೀಲಿ ನನ್ನ ಅವರ ಭೇಟಿಯಾಯ್ತು. ಇಲ್ಲಿಗೆ ನಾನೇ ಕರ್ಕೊಂಬಂದೆ " ಅಂತ ನಾಗತ್ತೆ ಪರಸ್ಪರ ಪರಿಚಯ ಮಾಡಿದರು.

ಕನ್ನಯ್ಯ—ಉಬ್ಬುಹಲ್ಲು, ಕಣ್ಣಿಗೆ ಕಪ್ಪು ಕನ್ನಡಕ ಪ್ರಾಯಶಃ ಏನೋ ಕಣ್ಣಿನ ದೋಷವಿರಬಹುದು ಅಂದುಕೊಂಡೆ ವಯಸ್ಸು ಚಿಕ್ಕದಾದರೂ ಈ ಎರಡು ದೋಷಗಳಿಂದ ಸ್ವಲ್ಪ ವೃದ್ಧಾಪ್ಯದ ಕಳೆ ಇತ್ತು. ಕುಸುಮ ಕೇವಲ ನಡುಮನೆ ಅಡಿಗೆಮನೆಗಳಲ್ಲಿ ಬೆಳೆವ ಹುಡುಗಿ ಇದ್ದ ಹಾಗಿದ್ದಳು. ಮಿಥ್ಯೆ ಬೈತಲೆ, ತಲೆ ಮೂಳೆಗೆ ಅಂಟಿಕೊಂಡಿದ್ದ ಜಡೆ, ನೋಡಿದ ತಕ್ಷಣ ಅರಸಿನ ಕುಂಕುಮಕ್ಕೆ ಕರೆಯೋಕ್ಕೆ ಲಾಯಕ್ಕಾದ ಹೆಣ್ಣು ಅಂತ ತೋರುತ್ತಿದ್ದಳು. ಯೋಚನೆಯಿಲ್ಲದೆ ಗೌರಿಬಾಗಿನ ಕೊಡಬಹುದಿತ್ತು. ಸ್ವಲ್ಪ ಕೂಡ ನಾಚಿಕೆ ಇಲ್ಲದೆ " ಭಾಗ್ಯಾದ ಲಕ್ಷ್ಮಿ ಬಾರಮ್ಮ" ಹಾಡು ಹೇಳುವ ಹುಡುಗಿ.

" ನೋಡು—ಈ ಕನ್ನಯ್ಯ ಎಂ. ಎ. ಪಾಸು ಮಾಡಿ, ಪ್ರಪಂಚದ ನಾನಾ ಜಾತಿ ಮತ್ತು ಮತಗಳ ಮೇಲೆ ಸಂಶೋಧನೆ ನಡೆಸ್ತಾ ಇದ್ದಾರೆ. ಮುಂದಿನ ತಿಂಗಳು ಜಪಾನಿಗೆ ಹೋಗ್ತಾರಂತೆ ಆಹ್ವಾನದ ಮೇಲೆ.

ಈ—ಹುಡುಗಿ ಕುಸುಮ ಬಿ. ಎ. ಮಾಡಿದ್ದಾಳೆ. ಯಾವ ಕೆಲಸವೂ ಬೇಡ ಸುಖವಾಗಿ, ಗೌರವವಾಗಿ ಸಂಸಾರಿಯಾಗಿ ಮನೆಯಲ್ಲೇ ನಾಲ್ಕು ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸಿ ಸಮಾಜಸೇವೆ ಮಾಡ್ಬೇಕು ಅಂತ ನಿರ್ಧರಿಸಿದ್ದಾಳೆ. ಒಳ್ಳೆ ದಿವ್ಯವಾದ ಹುಡುಗಿ."

ನಾಗತ್ತೆ ಈ ಅಣ್ಣ ತಂಗಿಯರನ್ನು ಪರಿಚಯ ಮಾಡಿಸುವಾಗ ವಹಿಸಿದ ಮುತುವರ್ಜಿ ನೋಡಿ, ಇದರ ಅರ್ಥ ವಿಪರೀತವಿರಬಹುದು ಅಂತ ಅನುಮಾನ ಬಂತು. ಕನ್ನಯ್ಯನನ್ನು ನೋಡಿದರೆ ಎಲ್ಲಾ ವಿದ್ಯಾವಂತರ ಹಾಗೆ ಸ್ವಲ್ಪ ಮೊದ್ದು ಆಸಾಮಿಯ ಹಾಗೇ ಕಾಣುತ್ತಿದ್ದ. ತಾನು ವಿದ್ಯೆ ಕಲಿಯುವ ಭರಾಟೆಯಲ್ಲಿ ಜೀವನದ ಬೇರೆ ಎಲ್ಲಾ ವಿಧವಾದ ಹವ್ಯಾಸಗಳನ್ನು ತನ್ನ ಹತ್ತಿರಕ್ಕೆ ಬರಕೊಡಲಿಲ್ಲ ವೆಂಬಂತೆ ತೋರುತ್ತಿತ್ತು. ಅವನನ್ನು ನೋಡಿದರೆ ಬೀಡಿ ಸಿಗರೇಟಿರಲಿ ಕಡೆಗೆ ಒಂದು ಲೋಟ ಕಾಫಿಗಾಗಿ ಹೋಟೇಲಿಗೆ ಕೂಡ ಕರೆಯಲು ಸಂಕೋಚವಾಗುತ್ತಿತ್ತು.

ಮಾರನೆಯ ದಿನ ನಾನು ನಾಗತ್ತೆಯನ್ನು ಭೇಟಿಯಾದಾಗ ನಾನು ನಿರೀಕ್ಷಿಸಿದ್ದ ಜ್ವಾಲಾಮುಖಿ ಹೊಗೆ ಆಡೇ ಆಡಿತ್ತು!

"ಹರಿ—ಕುಸುಮ ಹೇಗಿದ್ದಾಳೋ? ನಾಗತ್ತೆ ಕೇಳಿದರು ಇಂತಹ ಪ್ರಶ್ನೆಗೆ ಯಾರು ತಾನೆ ಏನು ಹೇಳಬಲ್ಲರು? ನಾನು ಸುಮ್ಮನಿದ್ದೆ

"ದಿವನಾಗಿದ್ದಾಳೆ. ನೀನು ಪುಣ್ಯ ಮಾಡಿದ್ದಿ ಇಂತಹ ಹೆಣ್ಣು ಸಿಗಬೇಕಾದರೆ ನಿನಗೆ." ಅಂದರು.

"ಅತ್ತೆ! ಈಗ ಆ ವಿಷಯವೇತಕ್ಕೆ? ಅವರು ಯಾರೋ ನಾವು ಯಾರೋ"

"ನಿನಗಾವಿಷಯ ಏಕೆ ಹರಿ? ನಿನ್ನೊಪ್ಪಿಗೆ ಕೊಡು. ಮಿಕ್ಕ ವಿಷಯ ನಾನು ಮಾತನಾಡುತ್ತೇನೆ."

"ನಾನು ಯೋಚಿಸಿ ಹೇಳ್ತೇನೆ ಅತ್ತೆ."

"ಯೋಚಿಸೋದು ಏನು ಬಂತು? ನಿನಗೊಬ್ಬ ಆ ಶನಿ ಭಂಟ ಇದ್ದಾನಲ್ಲ ಶೌರಿ! ಅವನ ಅಪ್ಪಣೆ ಆಗಬೇಕೇನೋ! ನಿನ್ನ ಆ ಶೌರಿಯ ಸಹವಾಸದಿಂದ ನಿನ್ನನ್ನು ಹೇಗಾದರೂ ಮಾಡಿ ಬಿಡಿಸೋವರಿಗೂ ನೀನೇನೂ ನೆಟ್ಟಗೆ ಆಗೋ ಹಾಗೆ ಕಾಣೊಲ್ಲ ಭಾಗೀರತೀಗೂ ಬರೀತೀನಿ. ಅವಳೂ ಬರ್ಲಿ ಇತ್ಯರ್ಥ ಮಾಡೋಣ." ಅಂದರು.

ತಲೆ ಸಿಡಿತದೊಡನೆ ಮನೆ ಸೇರಿದೆ ಶೌರಿಗೆ ವಿಷಯ ಪೂರ್ತಿ ವರದಿಮಾಡಿದೆ.

"ನಿಮ್ಮ ನಾಗತ್ತೆಯವರ ಉತ್ಸಾಹ ನ್ಯಾಯವಾದದ್ದೇ ಸರ್." ಅಂದ

ಅಂದು ಮಧ್ಯಾಹ್ನ, ನಾನು ಹಾಗೇ ಪೇಟೆ ಕಡೆ ಅಡ್ಡಾಡಿಕೊಂಡು ಬರೋಣ ಅಂತ ಹೊರಟಿದ್ದೇನೆ. ಕುಸುಮ ಬಂದಳು. ಒಬ್ಬಳೇ ಬಂದಳು. ನನಗಾಶ್ಚರ್ಯವಾಯ್ತು. ಬಹಳ ಸಂಕೋಚದಿಂದ ಬಂದಳು.

"ಏನಮ್ಮ ಸಮಾಚಾರ! ಬನ್ನಿ ಒಳಗೆ." ಅನ್ನುತ್ತಾ ಹಾಲಿನ ಸೋಪಾಮೇಲೆ ಕುಳ್ಳಿರಿಸಿದೆ.

"ಏನಿಲ್ಲ ಹೇಳೋಕೇ ಸಂಕೋಚವಾಗುತ್ತೆ. ಒಂದು ದೊಡ್ಡ ಗಂಡಾಂತರವಾಗಿಬಿಟ್ಟಿದೆ." ಅಂದಳು ಕೈ ಕೈ ಹಿಸುಕಿಕೊಳ್ಳುತ್ತಾ.

ಸುತ್ತ ನೋಡಿದೆ. ಶೌರಿ ಕಾಣಿಸಲಿಲ್ಲ.

"ಪರವಾಗಿಲ್ಲ ಹೇಳಮ್ಮ" ಅಂದೆ.

"ನಮ್ಮ ತಂದೆಯಿಂದ ತಾರು ಬಂತು. ನಮ್ಮ ತಾಯಿಗೆ ಸೀರಿಯಸ್ ಅಂತ. ಅಣ್ಣನ್ನ. ನನ್ನ ಬರಹೇಳಿ ಬರದಿದ್ದಾರೆ—"

"ಅಯ್ಯೋ ಪಾಪ!"

" ಹೊರಡೋಕೆ ತಯಾರಾಗಿದ್ದೇವೆ. ಆದರೆ—"

" ಆದರೆ—!"

" ಇವತ್ತು ಬೆಳಿಗ್ಗೆ ನಮ್ಮಣ್ಣ ಒಂದು ಮೂರ್ಖತನ ಮಾಡಿಬಿಟ್ಟ. ಟೌನ್ ಹಾಲಿನ ಬಳಿ ಜೂಜಾಟವಾಡಿ ಮುನ್ನೂರು ರೂಪಾಯಿ ಕಳೆದುಬಿಟ್ಟ!"

ಕುಸುಮ ಕಣ್ಣೊರಿಸಿಕೊಂಡಳು.

ನನಗೆ ದಿಗ್ಭ್ರಮೆಯಾಯ್ತು. ಕನ್ನಯ್ಯ ಒಬ್ಬ ಜೂಜುಭಟ್ಟ ನಿಜವಾಗಿ ಜೂಜಾಟವಾಡುವಷ್ಟು ನಾಗರಿಕನೆಂದು ನಾನು ಊಹಿಸಿರಲಿಲ್ಲ. ನಾನು ಕನ್ನಯ್ಯ ನನ್ನು ಇನ್ನೂ ಚೆನ್ನಾಗಿ ಅರಿತುಕೊಳ್ಳಬೇಕೆಂಬ ಕುತೂಹಲ ಹುಟ್ಟಿತು.

" ಏನು—ಕನ್ನಯ್ಯ ಜೂಜಾಟದಲ್ಲಿ ಭಾಗವಹಿಸಿದ್ದರೆ?" ಅಂತ ಕುತೂಹಲ ದಿಂದ ಕೇಳಿದೆ.

" ಹೌದು ಸರ್. ನನ್ನ ಅಪರಾಧಕ್ಕೆ ಎಷ್ಟು ವ್ಯಸನಪಟ್ಟರೂ ಸಾಲದು ಸರ್" —ಅನ್ನುತ್ತಾ ಕನ್ನಯ್ಯನೇ ಹಾಲಿನೊಳಗೆ ಪ್ರವೇಶಿಸಿದ ತಂಗಿಯ ಪಕ್ಕದಲ್ಲೇ ಕುಳಿತ.

ನನಗಂತೂ ಅವರಿಬ್ಬರನ್ನೂ ನೋಡಿ ತುಂಬಾ ಕನಿಕರ ಹುಟ್ಟಿತು. ಅವ ರಿಬ್ಬರೂ ಇಷ್ಟು ಬೇಗ ಮೈಸೂರು ಬಿಡಬೇಕಲ್ಲಾಂತ ವ್ಯಸನವಾಯ್ತು.

" ಈಗ ನನ್ನಿಂದೇನಾಗಬೇಕು?" ಅಂದೆ.

" ಏನಿಲ್ಲ—ನಮಗೆ ತಕ್ಷಣ ನಾನ್ನೂರು ರೂಪಾಯಿ ಬೇಕು. ಒಂದು ವಾರ ದಲ್ಲಿ ವಾಪಸು ಬಂದು ಕೊಟ್ಟುಬಿಡುತ್ತೇವೆ." ಅಂದ ಕನ್ನಯ್ಯ.

" ಅದಕ್ಕೇನು ಪರವಾಗಿಲ್ಲ—ನನ್ನಲ್ಲಿ ಈಗಲೇ ಕ್ಯಾಷ್ ಇರಬೇಕು—ಕೊಡು ತ್ತೇನೆ." ಅನ್ನುತ್ತಾ ಎದ್ದೆ.

ಕುಸುಮ ಎದ್ದಳು.

" ನಾವು ಹೊಸಬರು—ನಮ್ಮ ಪರಿಚಯ ನಿಮಗಿಲ್ಲ. ಆದ್ದರಿಂದ ಈ ವಜ್ರದ ಒಡವೆ ನಿಮ್ಮಲ್ಲಿರಲಿ. ಅದರ ಬೆಲೆ ಸುಮಾರು ಸಾವಿರ ರೂಪಾಯಿ ಆಗುತ್ತೆ." ಅನ್ನುತ್ತಾ ತನ್ನ ಸೆರಗಿನೊಳಗಿಂದ ಒಂದು ಪುಸ್ತಕದ ಮಾದರಿ ಪೆಟ್ಟಿಗೆ ಹೊರ ತೆಗೆದು ಅದರೊಳಗಿದ್ದ ಒಂದು ಒಡವೆ ನನಗೆ ತೋರಿಸಿ, ಪುನಃ ಪೆಟ್ಟಿಗೆ ಮುಚ್ಚಿ, ನನ್ನ ಕೈಗೆ ಕೊಟ್ಟಳು.

ನನಗೆ ಕತ್ತು ಕಿವಿಚಿದ ಹಾಗಾಯ್ತು.

" ಛೆ! ಎಲ್ಲಾದರುಂಟೆ? ನನಗೆ ಈ ರೀತಿ ವ್ಯವಹಾರಮಾಡಿ ಗೊತ್ತಿಲ್ಲ. ನಿಮ್ಮಲ್ಲಿ ಸಂಪೂರ್ಣ ನಂಬಿಕೆ ನನಗಿದೆ. ಇದನ್ನು ವಾಪಸು ತೆಗೆದುಕೊಳ್ಳಿ"

ಎಂದು ಎಷ್ಟು ಹೇಳಿದರೂ ಸಾರ್ಥಕವಾಗಲಿಲ್ಲ. ನಾನು ಕುಸುಮಳ ಕೈಗೆ ವಾಪಸು ಕೊಟ್ಟ ಪೆಟ್ಟಿಗೆಯನ್ನು ಕನ್ನಯ್ಯ ಪುನಃ ನನ್ನ ಕೈಲಿಟ್ಟು ಹೇಳಿದ.

"ಇದನ್ನಿಟ್ಟುಕೊಳ್ಳಿ—ಇಲ್ಲದಿದ್ದರೆ ನಮಗೆ ಹಣ ಬೇಡ." ಅಂದ.

ಏನೂ ಮಾಡಲರಿಯದೆ—ಆ ಒಡವೆ ಪೆಟ್ಟಿಗೆಯನ್ನು ಒಳಗಿಟ್ಟು ನಾನೂರು ರೂಪಾಯಿ ತಂದು ಕುಸುಮಳ ಕೈಲಿ ಕೊಟ್ಟೆ. ಅವಳು ಅಣ್ಣನ ಕೈಲಿಟ್ಟಳು—ಸಾಧ್ವಿ!

"ಬಹಳ ಉಪಕಾರವಾಯ್ತು. ಆದರೆ ನಮ್ಮ ತಂದೆ ಬಹಳ ಹಳಬರು. ಹಣ ಕಳುವಾಗಿ—ಹಣ ಸಾಲ ಪಡೆಯಲು ಒಡವೆ ಇಟ್ಟಿದ್ದೇವೆ ಅಂದರೆ ನಂಬುವುದಿಲ್ಲ. ಆದ್ದರಿಂದ ಸುಮ್ಮನೆ—ನೀವು ಒಂದು ಚೀಟಿ ಕೊಡಿ—ನೆಪಕ್ಕೆ ಮಾತ್ರ. ಒಡವೆ ನಿಮ್ಮಲ್ಲಿದ್ದುದಕ್ಕೆ ಒಂದು ಚೀಟಿ ಅಷ್ಟೆ. ಅದನ್ನು ತೋರಿಸಿದರೆ ನಮ್ಮ ತಂದೆ ತಕ್ಷಣ ಹಣ ಕೊಟ್ಟುಬಿಡ್ತಾರೆ." ಅಂದಳು ಕುಸುಮ.

ಅವಳ ವಾದ ನ್ಯಾಯವಾಗಿ ಕಂಡಿತು. ಒಂದು ವಜ್ರದ ಒಡವೆ ನನ್ನ ಬಳಿ ಇದೇಂತ ರಸೀತಿ ಕೊಟ್ಟೆ. ನನಗೆ ವಿಪರೀತ ವಂದನೆಗಳನ್ನು ಅರ್ಪಿಸುತ್ತಾ ಅಣ್ಣ ತಂಗಿ ಎದ್ದು ಹೊರಟರು ಇಷ್ಟೆಲ್ಲಾ ವ್ಯವಹಾರ ನಡೆದಾಗ ಸಧ್ಯ—ಶೌರಿ ಎಲ್ಲೂ ಇರಲಿಲ್ಲವಲ್ಲಾಂತ ಬಹಳ ಸಂತೋಷಪಟ್ಟು ಅವರಿಬ್ಬರನ್ನು ಬೀಳ್ಕೊಟ್ಟೆ.

ಶೌರಿ—ಧೂಮಕೇತುವಿನ ಹಾಗೆ ನುಗ್ಗಿದ! ಕನ್ನಯ್ಯ ಹಾಲಿಂದ ಹೊರ ಬಾಗಿಲನ್ನು ಪ್ರವೇಶಿಸುವುದಕ್ಕೂ, ಶೌರಿ ಹೊರಗಿಂದ ಒಳಗೆ ಧಾವಿಸುವುದಕ್ಕೂ ಸಮಯ ಧಾಳಿ ನಡೆಸಿ ಕೂಡಿಬಂದು, ಕನ್ನಯ್ಯ ಶೌರಿ ಇಬ್ಬರೂ ಘರ್ಷಿಸಿ, ಕನ್ನಯ್ಯನ ಮೇಲೆ ಶೌರಿ ಬಿದ್ದ.

ಇಬ್ಬರೂ ಎದ್ದರು.

"ಕ್ಷಮಿಸಿ ಸರ್. ಅಗಸರವನ ಷಾಪಿಗೆ ಹೋಗಿದ್ದೆ. ಇಸ್ತ್ರೀನ ಜುಬ್ಬಕ್ಕೆ ಕೊಡೋಕೆ ಹೋಗಿದ್ದೆ." ಅನ್ನುತ್ತಾ ಕನ್ನಯ್ಯನ ಕೋಟನ್ನು ಝಾಡಿಸಿ ಸರಿಪಡಿಸಿ, ಪುನಃ "ಕ್ಷಮಿಸಿ ಸರ್"—ಅನ್ನುತ್ತಾ ಒಳಗೆ ಓಡಿದ.

ಕನ್ನಯ್ಯ ಕುಸುಮ ತುಸ ಹೊತ್ತು ದಿಗ್ಭ್ರಾಂತರಾಗಿ ನಿಂತು, ತಮ್ಮ ದಾರಿ ಹಿಡಿದರು ನನಗೆ ಶೌರಿಯಮೇಲೆ ವಿಪರೀತ ಕೋಪ ಬಂದಿತ್ತು.

"ಇದೇನು ಹುಡುಗಾಟ ಶೌರಿ? ನೀನು ನಡೆಯುವಾಗ ಮುಂದೆ ಏನಿದೆ ಅಂತ ನೋಡಿಕೊಂಡಲ್ಲವೇ ಹೆಜ್ಜೆ ಇಡಬೇಕು? ಗೂಳಿ ನುಗ್ಗಿದ ಹಾಗೆ ನುಗ್ಗೋದೆ? ಪಾಪ ಅವನು ಮರ್ಯಾದಸ್ಥನಾಗುವ ಹೊತ್ತಿಗೆ ಸುಮ್ಮನಿದ್ದ." ಅಂದೆ ತುಸು ಬಿರುಸಾಗಿ.

" ಕ್ಷಮಿಸಿ ಸರ್. ಆಗಸರವನು ನಿಮ್ಮ ಷರಾಯಿಯನ್ನು ಅಡ್ಡಡ್ಡಲಾಗಿ ಇಸ್ತ್ರಿ ಹೊಡೆದಿದ್ದ. ಅದಕ್ಕೆ ಅವನಮೇಲೆ ರೇಗಿ ಬಂದಿದ್ದೆ. ಅದೇ ರೋಷದಲ್ಲಿ ನುಗ್ಗಿದ್ದೆ." ಅಂದ.

ಅಂದು ಸಂಜೆ ಸುಮಾರು ಸಿನಿಮಾ ಮೊದಲನೇ ಷೋ ಸಮಯ. ಶಿಂಗ್ರ್ತಿ ಬಂದ.

" ಹರೀ, ಈ ಕೂಡಲೇ ಬರಬೇಕಂತೆ. ಅಮ್ಮ ಹೇಳಿದಳು. " ಅಂದ.

" ಏನಂತೆ ? "

" ನಂಗೊತ್ತಿಲ್ಲ. ಶೌರೀಗೆ ಹೇಳಿ ನಿನ್ನ ಲೆಕ್ಕದಲ್ಲಿ ಎರಡು ಪ್ಯಾಕು ಸಿಗರೇಟ್ ತಕೊಂಡಿದ್ದೇನೆ. ಅಮ್ಮನ ಹತ್ತಿರ ಹೇಳಿಗೀಳೀಯ ?" ಅಂದ.

ನಾಗತ್ತೆಮನೆಯಲ್ಲಿ ನಾನು ಹೋಗುವ ಹೊತ್ತಿಗೆ ಗುಲ್ಲೋ ಗುಲ್ಲು. ಅಡಿಗೆಯ ಸುಬ್ಬಮ್ಮ, ಆಳುಕಾಳು, ಮುಸುರಿ ಹೆಂಗಸು ಎಲ್ಲಾ ಹಾಲಿನಲ್ಲಿ ಸೇರಿದ್ದಾರೆ. ನಾಗತ್ತೆ ತನ್ನ ಟ್ರಂಕು ತೆರೆದು ಸಾಮಾನುಗಳನ್ನೆಲ್ಲಾ ಹರಡಿಕೊಂಡು ಕುಳಿತಿದ್ದಾರೆ.

" ಬಾ ಹರಿ. ನೋಡು ನನ್ನ ಚಿನ್ನದ ಸರ ಮಾಯವಾಗಿದೆ ಮೊನ್ನೆ ತಾನೆ ಮೆರಗು ಹಾಕಿಸಿ, ಒಂದು ವಜ್ರ ಕೂಡಿಸಿ ತಂದಿದ್ದೆ. ಇವರೇ ಕದ್ದಿರಬೇಕು. ಭೇಗ ಹೋಗಿ ಪೋಲೀಸರನ್ನು ಕರ್ಕೊಂಡು ಬಾ " ಅಂದರು ನಾಗತ್ತೆ.

ನನಗಂತೂ ಬುದ್ಧಿಯೇ ಓಡಲಿಲ್ಲ ನನಗೆ ಪೋಲೀಸು ಅಂದರೆ ಸ್ವಲ್ಪ ಅಷ್ಟಕ್ಕಷ್ಟೆ. ಹಿಂದೆ ಒಂದು ಬಾರಿ ಒಂದು ಹೆಣ್ಣು ಮಕ್ಕಳ ಕಾನ್ವೆಂಟಿನಲ್ಲಿ ರಾತ್ರಿ ಸಮಯ ಒಬ್ಬ ಪೋಲೀಸನ ಕೈಲಿ ಸಿಕ್ಕಿ, ನನ್ನ ಪಾಡು ನಾಯಿ ಪಾಡಾಗಿತ್ತು. ಒಳ್ಳೆಯ ಸಮಯಕ್ಕೆ ಶೌರಿ ಪ್ರತ್ಯಕ್ಷನಾಗಿ ನನ್ನನ್ನು ಕಾಪಾಡಿದ್ದ. ಅದರ ನೆನಪು ಬಂದು ಹಾಗೇ ನಿಂತಿದ್ದೆ.

" ಇದೇನು ಹರಿ ! ರಾವು ಬಡಿವವನಹಾಗೆ ನಿಂತಿದ್ದಿ ? ನನ್ನ ಚಿನ್ನದ ಸರ ಹೋಗಿದೆ ! ಪೋಲೀಸರಿಂದಲ್ಲದೆ ಈ ಶನಿಗಳ ಬಾಯಿ ಬಿಡಿಸಲು ಯಾರಿಂದಲೂ ಸಾಧ್ಯವಿಲ್ಲ. ಬೇಗ ತೊಲಗು!" ಅಂದರು.

" ತಾಳು ಅತ್ತೆ. ಯಾವಾಗ ಕಳ್ಳತನವಾಯ್ತು ? ಹೇಗಾಯ್ತು ! ಇಷ್ಟು ದಿನ ನಂಬಿಕೆಯಿಂದ ಕೆಲಸ ಮಾಡಿದವರ ಮೇಲೆ ಈ ರೀತಿ ಅನುಮಾನ.... "

" ಹರಿ ! ನಿನ್ನ ಪುರಾಣವನ್ನು ಬಿಗಿಯೋಕಲ್ಲ ನಾನು ಇಲ್ಲಿಗೆ ಕರೆಸಿದ್ದು. ಈಗ ದಸರಾ ! ಖರ್ಚಿಗೆ ದುಡ್ಡು ನಾಯಿಗೂ ಬೇಕಾಗಿದೆ ! ಉಂಡ ಮನೆಗೆ ಎರಡು ಬಗೆಯೋ ಈ ಜನಕ್ಕೆ ನಂಬಿಕೆ ಅಂದರೆ ಅರ್ಥ ಗೊತ್ತಿಲ್ಲ ! ಗಂಡ್ಸು ಅಂತ ನಿನ್ನ ಕರೆಸಿದೆ. ನೀನು ಹೋಗ್ತೀಯೋ ಇಲ್ಲಾ ನಾನೇ ಹೋಗಲೋ ?'

" ಆಗಲಿ ಅತ್ತೆ ನಾನೇನೋ ಹೋಗ್ತೇನೆ. ಆದರೆ ಪೋಲೀಸರನ್ನ ಕರೆಸಿದ ಹಾಗೇ ಉಪಾಯವಾಗಿ........"

"ನಿನ್ನ ಮಾವನ ಹಾಗೆ ತಲೆಯೆಲ್ಲಾ ಹರಟಬೇಡ ಈಗಲೇ ಹೊರಡು ಹರಿ." ಅಂದರು.

"ಸರಿ—ಅತ್ತೆ" ಅಂದೆ.

"ನಿಮ್ಮ ಸರ ಕದ್ದಿರುವ ಕಳ್ಳ ನಿಮ್ಮ ಕೈಗೆ ಸಿಗೊಲ್ಲ ಅಮ್ಮ!"

ಒಂದು ಪರಿಚಿತಧ್ವನಿಯಿಂದ ಈ ಮಾತು ಕೇಳಿಬಂತು. ಎಲ್ಲರೂ ತಿರುಗಿದೆವು.

ಶೌರಿ!

"ಇದೇನು ಶೌರಿ? ಎಲ್ಲಿದ್ದೆ? ಹೇಗಿದ್ದೆ? ಏಕೆ ಬಂದೆ! ಹೇಗೆ ಬಂದೆ!" ಅಂತ ಕೇಳಿದೆ

"ನಿಮ್ಮತ್ತೆಯವರ ಸರದ ವಿಚಾರ ತಿಳಿಸಲು ಬಂದೆ ಸರ್." ಅಂದ.

"ಅದೆಲ್ಲಿದೆಯಪ್ಪಾ? ನಿನ್ನ ಕೈಗೇನಾದರೂ ಬಂತೇನಪ್ಪಾ?" ಅಂತ ಕಾತುರ ದಿಂದ ನಾಗತ್ತೆ ಕೇಳದಳು.

"ಅದನ್ನು ಕದ್ದವರು ಮತ್ಯಾರಿಲ್ಲಮ್ಮ. ಇದುವರಿವಿಗೂ ನಿಮಗೆ ಅಚ್ಚು ಮೆಚ್ಚಾಗಿದ್ದ ಅಣ್ಣ ತಂಗಿ - ಕನ್ನಯ್ಯ ಮತ್ತು ಕುಸುಮ ಅಮ್ಮ ಅವರು ಇಂದು ಮಧ್ಯಾಹ್ನ—ತಾರು ಬಂತು ಅಂತ ಹೇಳಿ ಹೊರಟರಲ್ಲವೆ ಅಮ್ಮ?"

"ಹೌದಪ್ಪಾ ತಾರನ್ನು ನನಗೆ ತೋರಿಸಿದರಪ್ಪಾ. ಅವರು ಬೇಡಾಂದರೂ —ಕೈಗೆ ಐವತ್ತು ರೂಪಾಯಿ ಕೊಟ್ಟು ಕಳ್ಸಿದೆನಪ್ಪಾ!"

"ಪರವಾಗಿಲ್ಲಮ್ಮ ಕೇವಲ ಐವತ್ತೇ ರೂಪಾಯಿಗೆ ಬುದ್ಧಿ ಕಲಿತ ಹಾಗಾಯ್ತಮ್ಮ!"

"ಅದಿರಲಪ್ಪಾ. ಆ ಸರದ ಸಮಾಚಾರವೇನು?"

ನನ್ನ ಹೃದಯ ನನ್ನ ಬಾಯಿಗೆ ಬಂತು. ಶೌರಿ ಬಂದು ಮಾತು ಶುರು ಮಾಡಿದಾಗಿನಿಂದ ನನ್ನ ತಲೆಯಲ್ಲಿ ಏನೋ ಒಂದು ತರಹ ಭೀತಿ ಹುಟ್ಟಿತ್ತು. ಶೌರಿ—ಮುಂದೆ ಏನು ಹೇಳುತ್ತಾನೋ ಅಂತ ಹೃದಯ ತಳಮಳಿಸಿತು.

"ಈ ಮಧ್ಯಾಹ್ನ ಊಟಮಾಡಿ ನೀವು ಮಲಗಿದ್ದಾಗ ಈ ಕಾರ್ಯ ನಡೆದಿದೆ ಯಮ್ಮ ಕನ್ನಯ್ಯ—ಆ ಸರವನ್ನೆತ್ತಿಕೊಂಡು ಈ ಮನೆಯಿಂದ ಹೊರಬಿದ್ದಾಗ, ನಾನು ಅಕಸ್ಮಾತ್ ಈ ಕಡೆ ಹೋಗ್ತಾ ಇದ್ದೆ ಅವನ ಚರ್ಯೆ ನೋಡಿ ಅನುಮಾನ ಬಂತಮ್ಮ ಅವನನ್ನ ಹಿಂಬಾಲಿಸಿದೆ. ಕಡೆಗೆ ಅವನ ಗುರುತೂ ಹಚ್ಚಿದೆ ಅಮ್ಮ!"

"ಏನಪ್ಪ ಹಾಗಂದ್ರೆ?"

"ಕನ್ನಯ್ಯ—ಮತ್ಯಾರಲ್ಲಮ್ಮ ಪ್ರಸಿದ್ಧ ದರೋಡೆಕಾರ—ಕನ್ನಾಭಿರಾಮ ನಮ್ಮ ಈ ರೀತಿ ಅವನು ಮತ್ತು ಅಕೆ ಇಬ್ಬರೂ ಅಣ್ಣ ತಂಗಿ, ಗಂಡ ಹೆಂಡತಿ, ತಂದೆ ಮಗಳು ಅಂತ ಹೇಳಿಕೊಂಡು ನಂಬಿಕೆದ್ರೋಹ ಮಾಡಿ ಜೀವನ ನಡಸ್ತಾರಮ್ಮ."

" ಅಯ್ಯೋ ದೇವರೆ! ಇಷ್ಟು ತಿಳಿದೂ ನನಗೊಂದು ಮಾತು ತಿಳಿಸಬೇಡವೆ ನೀನು ?"

ನಾನು ಹೇಳಿದ್ದರೂ ನಂಬುತ್ತಿರಲಿಲ್ಲವಮ್ಮಾ ನೀವು: ಅವರಲ್ಲಿ ಪೂರ್ತಿ ಮನ ಸೋತಿದ್ದಿರಲ್ಲವಮ್ಮಾ!"

ಪ್ರಾಯಶಃ ಇದುವರೆವಿಗೂ ನಮ್ಮ ನಾಗತ್ತೆ ಎದುರು ಇಷ್ಟು ದಿಟ್ಟವಾಗಿ ನಿಂತು ಯಾರೂ ಮಾತನಾಡಿರಲಿಲ್ಲ ನನಗೆ ಶೌರಿಯ ಬಗ್ಗೆ ಬಂದ ಹೆಮ್ಮೆ ಅಷ್ಟಿಷ್ಟಲ್ಲ!

" ಹೋಗಲಪ್ಪ. ಕಳ್ಳತನ ಮಾಡಿದ ಮೇಲಾದರೂ ಅವರನ್ನ ಪೋಲೀಸಿಗೆ ಹಿಡಿದುಕೊಡಬಾರದಾಗಿತ್ತೆ ?" ನಾಗತ್ತೆ ತುಸ ಬಿರುಸಿನಿಂದ ಕೇಳಿದರು.

" ಅದರಿಂದ ಏನೂ ಪ್ರಯೋಜನವಾಗಲಾರದಮ್ಮ. ಸುಮ್ಮನೆ ಪೋಲೀಸರ ಹಾವಳಿ, ಕೇಸು—ಇವುಗಳಲ್ಲಿ ಈಗಾಗಿರುವ ನಷ್ಟದ ಜೊತೆಗೆ ಮತ್ತಷ್ಟು ಖರ್ಚು ಆಗುತ್ತಿತ್ತು ಅಷ್ಟೇಮ್ಮ"— ಶೌರಿ ಮೊದಲಿನ ರೀತಿಯೇ ಶಾಂತವಾಗಿ ಉತ್ತರಿಸಿದ.

" ಷಹಭಾಸ್ !" ಅಂದೆ ಮನಸ್ಸಿನಲ್ಲಿಯೇ.

ನಾಗತ್ತೆಗೆ ಶೌರಿಯೊಡನೆ ಈ ಭೇಟಿ ಸ್ವಲ್ಪ ಬೇಸರ ತಂದಿತ್ತು.

"ಸರಿ ನೀನೊಬ್ಬ ಮಾತಿನ ಮಲ್ಲ. ನನಗೆ ಮೊದಲೇ ತಿಳಿದಿತ್ತು. ನೀನೇನು ಹೇಳಿದರೂ ನಾ ನಂಬೆ ನಿನಗೆ ಇಷ್ಟೆಲ್ಲಾ ತಿಳಿದು ನೀನು ಮಾಡಿದ್ದೇನು ? ನಿನ್ನ ಮಾತು ನಿಜ ಅಂತ ಭರವಸೆ ಏನು ?" ಅಂದರು.

" ಇಗೋಮ್ಮ " ಅನ್ನುತಾ ಯಕ್ಷಿಣಿಗಾರ ತನ್ನ ಕಿಸೆಯಿಂದ ಮೊಲವನ್ನು ತೆಗೆಯುವ ಹಾಗೆ, ಶೌರಿ ತನ್ನ ಕಿಸೆಯಿಂದ ಒಂದು ಸರ ತೆಗೆದು " ಇದೇ ತಾನೆ ನಿಮ್ಮ ಸರ ಅಂತ ಕೇಳಿದ.

ಎಲ್ಲರ ಕಣ್ಣು ಆ ಸರದಮೇಲೆ ಬಿತ್ತು.

ನಾಗತ್ತೆಯ ಮುಖ ನೋಡಲು ತುಂಬಾ ಚೆನ್ನಾಗಿತ್ತು. ಒಂದು ಕಡೆ ಸರ ನೋಡಿ ಸಂತೋಷ ಒಂದು ಕಡೆ ತನ್ನ ನೌಕರರ ಮೇಲೆ ಇಷ್ಟು ದುಡುಕಿದೆನಲ್ಲಾ ಅನ್ನುವ ನಾಚಿಕೆ!

ನಾನು ಈ ಸಂದರ್ಭವನ್ನು ಆದಷ್ಟು ಉಪಯೋಗ ಮಾಡಿಕೊಳ್ಳಲು ನಿರ್ಧರಿಸಿದೆ. ಕೆಲಸದವರನ್ನೆಲ್ಲಾ ಒಳಗೆ ಹೋಗಲು ಸನ್ನೆ ಮಾಡಿದೆ. ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡು ಒಳಗೆ ಹೋದರು.

ನಾಗತ್ತೆಯನ್ನು ತರಾಟೆಗೆ ತೆಗೆದುಕೊಂಡೆ.

" ನಾಗತ್ತೆ. ನೀನು ವಿಪರೀತ ದುಡುಕು! ವೃಥಾ ಈ ಕೆಲಸದವರ ಮೇಲೆ ಅಪಾದನೆ ಹೊರಿಸಿ ತಾಪತ್ರಯ ಮಾಡಿಕೊಳ್ಳುತ್ತಿದ್ದೆ! ಅಷ್ಟೇ ಅಲ್ಲದೆ ಇನ್ನು ಮೇಲೆ

ನೀನು ನನಗೆ ಹೆಣ್ಣು ಹುಡುಕುವಾಗ ಸ್ವಲ್ಪ ಎಚ್ಚರಿಕೆ ವಹಿಸಿದರೆ ಒಳ್ಳೆಯದು. ಒಂದು ವೇಳೆ ಇದೇ ಈ ಕುಸುಮಳನ್ನ ಮದುವೆಯಾಗಿದ್ದಿದ್ದರ ನನ್ನ ಗತಿ ಏನಾಗುತ್ತಿತ್ತು? ನಿನ್ನ ಗತಿ ಏನಾಗುತ್ತಿತ್ತು. ನಿನ್ನ ಮೊಮ್ಮಕ್ಕಳು ಸಾಲಾಗಿ ಜೈಲಿಗೆ ರವಾನೆಯಾಗ್ತಾ ಇದ್ದರೋ ಏನೋ! ಕುಸುಮ? ಅದೇನು ಹೆಸರು! ಅದೇನು ನಮ್ರತೆ! ಗೋಮುಖವ್ಯಾಘ್ರ ಅಂತಾರಲ್ಲಾ ಅತ್ತೇ... ಅದೇ...."

"ಬಾಯಿ ಮುಚ್ಕೋ ಹರಿ! ನನ್ನ ಕೋಪಕ್ಕೆ ಇನ್ನಷ್ಟು ಬೆಂಕಿ ಹಚ್ಚಬೇಡ. ಈಗಲೂ ನಿನ್ನ ಶೌರಿಯ ಮಾತಿನಲ್ಲಿ ನನಗೆ ನಂಬಿಕೆಯಿಲ್ಲ. ನಿನಗೀ ಹುಡುಗರು ಎಲ್ಲಿ ಸಿಕ್ಕಿದರಪ್ಪಾ ಶೌರಿ?"

ನನ್ನ ಹೃದಯಬಡಿತ ಎರಡು ಮೂರು ಹೆಜ್ಜೆಗಳನ್ನು ಮುಗ್ಗರಿಸಿತು.

"ನಿನ್ನೆ ರಾತ್ರಿ ವಸ್ತುಪ್ರದರ್ಶನದಲ್ಲಿ ಒಂದು ಗಡಿಯಾರ ಕಳವು ಮಾಡಿದ್ದರಮ್ಮಾ ನನಗೆ ಗುಮಾನಿ ಬಂದು ಇವರನ್ನು ಹಿಂಬಾಲಿಸುತ್ತಿದ್ದಾಗ ನಾನೇ ಕಣ್ಣಾರ ನೋಡಿದೆ. ಆದರೆ ಕೇವಲ ಅರ್ಧ ನಿಮಿಷದಲ್ಲಿ ಎಲ್ಲೋ ಮಾಯವಾದರು"

"ಅಯ್ಯೋ ದೇವರೆ! ಇವತ್ತು ಬೆಳಿಗ್ಗೆ ಆ ಮಿಟಕಲಾಡಿ—ನಮ್ಮಣ್ಣ ಕೊಡಿಸಿದ್ದು ಅಂತ ಒಂದು ಸುಜಾತಾ ಗಡಿಯಾರ ತೋರಿಸಿದಳಲ್ಲಾ!"

"ಇವತ್ತು ಮಧ್ಯಾಹ್ನ ನಿಮ್ಮ ಮನೆಯಿಂದ ಹೊರಟವರು ನೂರಡಿ ರಸ್ತೆಯಲ್ಲಿ ಒಂದು ಕಡೆ ಈ ಸರವನ್ನು ಮಾರಲು ಹೊರತೆಗೆದಿದ್ದಾಗ—ಕನ್ನಯ್ಯನಿಗೆ ಹಠಾತ್ತನೆ ನಾನು ಎದುರಿನಿಂದ ಘರ್ಷಿಸಿ, ಆ ಗಲಾಟೆಯಲ್ಲಿ ಇದನ್ನು ತೆಗೆದುಕೊಂಡು ಬಂದೇಮ್ಮ"

ಶೌರಿ ನನ್ನ ಕಡೆ ತಿರುಗಿದ.

"ಸರ್—ಸದಾಶಿವರಾಯರು ಮನೇಲಿ ಕಾದಿದ್ದಾರೆ ಸರ್. ಎಷ್ಟು ಹೊತ್ತಾದರೂ ನೋಡಲೇ ಬೇಕಂತೆ"

ಅನ್ನುತ್ತಾ ಅಲ್ಲಿಂದ ಹೊರಡಲು ಸನ್ನೆ ಮಾಡಿದ.

ಇಬ್ಬರೂ ನಾಗತ್ತೆಯ ಮನೆ ಬಿಟ್ಟೆವು.

"ಶೌರಿ"

"ಸರ್"

"ಆ ಸರದ...."

"ಹೌದು ಸರ್ ಮಧ್ಯಾಹ್ನ ನಮ್ಮ ಮನೆಯಲ್ಲಿ ಕನ್ನಯ್ಯನಿಂದ ಕಸುಕೊಂಡಿದ್ದು ಸರ್."

"ಆದರೆ ಶೌರಿ—ನನ್ನ ಹತ್ತಿರ ಆ ಆಭರಣದ ಡಬ್ಬೀಲಿ ಬೇರೆ ಒಂದು ಸರ ಇದೆಯಲ್ಲಾ!"

ಪ್ರಾಯಶಃ ಅದು ಖಾಲಿ ಇದೆ ಸರ್. ನಿಮಗೆ ತೋರಿಸುವಾಗ ಮಾತ್ರ ಸರವಿತ್ತು ಸರ್."

"ಆದರೆ ಶೌರಿ — ನಾನು ಪೆಟ್ಟಿಗೆಯಲ್ಲಿಡುವಾಗ ಅದನ್ನು ಪುನಃನೋಡ ಲಿಲ್ಲವೆ?"

"ಪ್ರಾಯಶಃ" ನೋಡಿಲ್ಲ ಸರ್ ಕನ್ನಯ್ಯ—ಒಳ್ಳೆಯ ಮನಶ್ಶಾಸ್ತ್ರಜ್ಞ ಸರ್."

"ಅಂದರೆ ಶೌರಿ ನನ್ನ ನಾನೂರು ರೂಪಾಯಿ!"

"ಇಲ್ಲೇ ಇದೇ ಸರ್. ಪ್ರಾಯಶಃ ನೋಟುಗಳು ಸ್ವಲ್ಪ ಅಜ್ಜಿಬಜ್ಜಿಯಾಗಿರ ಬಹುದು."

—ಅನ್ನುತ್ತಾ ತನ್ನ ಒಳ ಕಿಸೆಯಿಂದ ಒಂದು ಮುಷ್ಟಿ ತುಂಬಾ ನೋಟು ಗಳನ್ನು ತೆಗೆದು ತೋರಿಸಿದ.

"ಶೌರಿ ಆ ರಶೀತಿ ಅವನ ಹತ್ತಿರವೇ ಇದೆಯಲ್ಲ!"

"ಪುನಃ ಈ ಕಡೆ ಕನ್ನಯ್ಯ ಭೇಟಿ ಕೊಡಲಾರ ಸರ್. ತನಗೆ ಸಮನಾದ ಬುದ್ಧಿವಂತರಿದ್ದಾರೆ ಅಂತ ತಿಳಿದರೆ ಆ ಕಡೆ ಕನ್ನಯ್ಯ ತಲೆ ಹಾಕೊಲ್ಲ ಸರ್."

"ಶೌರಿ ನಿನಗೆ ಇವರೇ ಕನ್ನಾಭಿರಾಮ ಮತ್ತು ಕಂಪೆನಿ ಅಂತ ಮೊದಲಿಂ ದಲೂ ತಿಳಿದಿತ್ತೇ?"

ನೀವು ನಿಮ್ಮತ್ತೆ ನಿಮಗೆ ಹೆಣ್ಣು ನೋಡಿದ್ದಾರೆ ಅಂತ ತಿಳಿಸಿದ ತಕ್ಷಣ ಕುತೂ ಹಲದಿಂದ ಅವರನ್ನು ನೋಡಿದೆ ಸರ್. ಅವರಿಬ್ಬರ ಜೋಡಿ, ಚರ್ಯೆ ಪರಸ್ಪರ ಮಾತುಕತೆ ಇವೆಲ್ಲವನ್ನೂ ಸೂಕ್ಷ್ಮವಾಗಿ ನೋಡಿದಾಗ ನನಗೆ ಸಂಶಯವೇ ಇರಲಿಲ್ಲ ಸರ್"

"ಪಾಪ ನಾಗತ್ತೆ ಐವತ್ತು ರೂಪಾಯಿ ವೃಥಾ ಕಳಕೊಂಡರು ಅಲ್ವೆ ಶೌರಿ?"

"ವೃಥಾ ಅಲ್ಲ ಸರ್. ಅನುಭವದ ಬೆಲೆ ಸರ್." ಮನೆ ಸೇರಿದೆವು

"ಸರ್ ಸದಾಶಿವರಾಯರು ಬಂದಿಲ್ಲ ಸರ್."

"ಸರಿ ಶೌರಿ" ಅಂದೆ ಭಕ್ತಿ ಇಂದ.

—ಕೇಫ

ಹಿತ್ತಲ ಗಿಡ ಮದ್ದಲ್ಲ.

ಮೈಸೂರು ಪಂಡಿತರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಲಾಯಕ್ಕಿಲ್ಲ.

ಕೊರವೇಶ್ವರ ವಚನಗಳು

ಭ್ರಷ್ಟಾಚಾರ

ವ್ಯಕ್ತಿ ಸಂಸ್ಥೆಗಳ ಮೇಲಿನ ಸಭ್ಯತನದ ಮುಸುಕನೆಳೆಯಲು ಬೇಡ, ಒಳಗೆ ದಟ್ಟ ಬೆಳೆದುಕೊಂಡಿಪ್ಪುದೊಂದು ಬೆಳೆ—ಅಲ್ಲ—ಕಳೆ. ಆ ಕಳೆಯು ಕೀಳುವುದಿರಲಿ, ಅಳೆವುದೇ ಒಂದು ಸಮಸ್ಯೆಯಯ್ಯ, ಓರೋರ್ವರು ಒಂದೊಂದು ರೀತಿ ನುಡಿವರಯ್ಯ ಅದರ ವ್ಯಾಪ್ತಿಯು ಕುರಿತು—ಎಂದು ಎಚ್ಚರಿಸುವ ನಮ್ಮ ಕೊರವೇಶ್ವರ.

ಚಾಳಿ ಒಂದು, ಹೆಸರು ಹಲವು. ಲಂಚ, ರುಷುವತ್ತು, ಹರಕೆ, ತೊಡುಗೆ. ಕಾಣಿಗೆ, ಬಹುಮಾನ, ದಾನ. tip ಉ—ಹೀಗೆ ಹತ್ತು ಹಲವು ರೂಪಗಳಿಂದ ಭ್ರಷ್ಟಾಚಾರ ಮೆರೆವುದ ಕಂಡ ನಮ್ಮ ಕೊರವೇಶ್ವರ.

ಕೈ ಬಿಸಿಮಾಡಿ ಕರೆದೊಡೆ ಲೋಕಕೆ ಲೋಕವೇ ಓ ಎಂಬುದು, ಬಂದೆ ಬಾ ಎಂದರೆ ದೇವನೂ ಬಾರ. ಬಿಸಿಮಾಡಲರಿಯದ ಬೆಣ್ಣೆ ಹಚ್ಚಲು ಬರದ ಪಾಪಿ ಹೋ ಎಂದೊರಲಿದರೆ ಮೌನವಪ್ಪುದು ಜಗ – ಎಂಬ ನಮ್ಮ ಕೊರವೇಶ್ವರ.

ಬಾಯ ಬಡಿಗೆಯಿಂದ ಬಡಿದ ಮಾತ್ರಕ್ಕೆ ಭ್ರಷ್ಟಾಚಾರದ ನಿರ್ಮೂಲನವಾಗುವುದೇನಯ್ಯ? ಭ್ರಷ್ಟಾಚಾರದ ದೀಕ್ಷೆ ಪಡೆದವರಿಗೇ ಮನಿ, ಮನ್ನಣೆ, ಮಹಲು ಯೆಂಬುದು ಖಚಿತವಾದ ಬಳಿಕ ಅದನು ಕೊನೆಗಾಣಿಪ ಯತ್ನ ನಗೆಪಾಟಲಯ್ಯ ನಗೆಪಾಟಲು ಎಂಬ ನಮ್ಮ ಕೊರವೇಶ್ವರ.

ಎನಿತೆನಿತು ಸದಾಚಾರ ಸಮಿತಿಗಳಿದ್ದರೇನು. ಭ್ರಷ್ಟಾಚಾರದ ದಂಡಿನ ದಮನ ಸುಲಭವೇ? ಎನಿಸೊಂದು ದೂರುಗಳಿಗೆ ಕಿವಿಗೊಟ್ಟರೇನು, ಬೇರು ಸಹಿತ ಕಿತ್ತಲ್ಲದೆ ಆ ಮಹಾನ್ಯಗ್ರೋಧ ಅಳಿಯದಯ್ಯ. ಮಹಾ ಮಹಾ ಘಟಾನುಘಟಿಗಳನೊಳಗೊಂಡ ಆ ಬೇರನು ಕಿತ್ತೆಸೆಯುವ ಮಹಾಬಲನೊಬ್ಬ ಮೈದೋರುವ ತನಕ ನಂದಾದಿಗಳು ಚಿವುಟಿದ ಕುಡಿ ಒಂದಕ್ಕೆ ಚಿಗುರೆರಡು ಮೊಳೆಯಿತೆಂಬಂತೆ ಭ್ರಷ್ಟಾಚಾರದ ವೃಕ್ಷ ಬೆಳೆಯುತ್ತಲೇ ಇರುವುದೆಂಬ ನಮ್ಮ ಕೊರವೇಶ್ವರ

ಆರು ತೆರಳಿ ಎಮ್ಮನೇನು ಮಾಡುವರು. ನಂದಾದಿಗಳು ಉರಿದು ಎಮ್ಮನೆಂತು ಕಾಡುವರು. ತುದಿಯಿಂದ ಬುಡತನಕ ನಾಡ ಉದ್ದಗಲ ಹಬ್ಬಿರುವ ನಮ್ಮ ಬಳಗದವನು ನಿರ್ನಾಮಗೊಳಿಸುವೆನೆಂಬುವರು ಆ ಜಲಧಿಯ ಶೋಷಿಸುವ ಕಜ್ಜುಗಳಿವುದೇ ಲೇಸು ಎಂಬವರ ವಿಕಟಾಟ್ಟಹಾಸವನು ಕಂಡ ನಮ್ಮ ಕೊರವೇಶ್ವರ.

ಅಕಟಕಟ ನಂದಾ ನಿಮಗಿನಿತು ಕರುಣವಿಲ್ಲ, ಇನಿತು ಮುಂದಾಲೋಚನೆಯೂ ಇಲ್ಲ. ಏಕೆ ಹುಯಿಲಿಡುತಿರುವಿರಿ ಭ್ರಷ್ಟಾಚಾರವೆಂದು. ಏಕೆ ಎಗರಾಡುತ್ತಿರುವಿರಿ ಸದಾಚಾರ ಸಮಿತಿಗಳೆಂದು? ಬೇರೆ ಚಳುವಳಿಯೇನೂ ನಿಮಗೆ ಹೊಳೆಯಲಿಲ್ಲವೆ ನಂದಾಜಿ ಎಂದು ಕೈ ಕೊಡಹುವವರ ಕಂಡ ನಮ್ಮ ಕೊರವೇಶ್ವರ.

ಭ್ರಷ್ಟಾಚಾರ ನಮ್ಮಲ್ಲಿ ಮಾತ್ರವೇನು, ಎಲ್ಲೆಲ್ಲಿಯೂ ಎಲ್ಲ ದೇಶಗಳಲ್ಲಿಯೂ ಇಹುದು. ನಮ್ಮ ಐಬನು ಹಿರಿದು ಮಾಡಿ ಹಿಗ್ಗಿಸಹೋಗುವುದು ನಮ್ಮ ಮಾತಿಗೆ ನಾವೇ ಎಂಜಲುಗಿದುಕೊಂಡಂತೆ. ಅದರಿಂದೇನು ಉದ್ದಾರವೆಂದು ಸವಾಲು ಹಾಕುವ ದಿಟ್ಟೆ ಮಂತ್ರಿಣಿಯನು ಅವಳಪ್ಪನಾತ್ಮ ರಕ್ಷಿಸಲಿ ಎಂಬ ನಮ್ಮ ಕೊರವೇಶ್ವರ.

ಸಾಧಿಸಬೇಕಾದುದೇನೂ ಇಲ್ಲದಾಗ ನಾವೆಲ್ಲರೂ ಭ್ರಷ್ಟಾಚಾರದ ವೈರಿಗಳೇ, ಅಪ್ಪಟ ಸದಾಚಾರಿಗಳೇ. ಆದರೆ ಒಂದು ಸೀಟು ಒಂದು ನೌಕರಿ, ಒಂದು ಪರ್ಮಿಟು, ಒಂದೆರಡು ಲಕ್ಷ ಹೊನ್ನು, ಒಂದೆರಡು ಬ್ಯಾಂಕ್ ಎಕೌಂಟು ಒಂದೆರಡು ಮನೆ, ಒಂದು ಉನ್ನತ ಸ್ಥಾನ ಹೀಗೆ ಏನಾದರೊಂದು ಬೇಕೆಂಬ ಹಂಬಲ ಮೂಡಿದಾಗ ಮಾತ್ರ ಭ್ರಷ್ಟಾಚಾರ ವೇನೆಂಬುದೇ ನಮಗೆ ಅರ್ಥವಾಗದಯ್ಯ. ಅದು ಕಪ್ಪೋ ಬಿಳಿಯೋ ಎಂದು ಕೇಳುವಷ್ಟು ಮುಗ್ಧರಾಗುವೆವಯ್ಯ ಎಂಬ ನಮ್ಮ ಕೊರವೇಶ್ವರ.

ಈ ಎಲ್ಲ ಹಗರಣದೊಳಗೆ ನಮ್ಮ ಸುಬ್ಬಾಭಟ್ಟರಿಗೆ ಬಲು ಕೋಪವಯ್ಯ. ಆಚಾರ್ರ ವಂಶದವರೆಂದರೆ ಅವರಿಗಾಗದು ಗೊತ್ತು ತಾನೆ? ಈಗಲೋ ಪತ್ರಿಕೆಯಲ್ಲಿಯೂ ಅವನೇ, ಮಂತ್ರಿಗಳ ಭಾಷಣದಲ್ಲಿಯೂ ಅವನೇ, ಜನಗಳ ಬಾಯಲ್ಲಿಯೂ ಅವನೇ, ಎಲ್ಲೆಲ್ಲಿಯೂ ಆಚಾರ್ರ ವರ್ಗದವರನೇ ಮನ್ನಿಸುವರಯ್ಯ ಏನಿದನ್ಯಾಯ? ಭ್ರಷ್ಟಾಚಾರ್ ಭ್ರಷ್ಟಾಚಾರ್ ಎಂದು ಅವನನ್ನೇ ವರ್ಣಿಸುವುದರ ಒಳಗುಟ್ಟಾದರು ಏನು ಎಂದು ಭಟ್ಟರು ಕನಲುವುದ ಕಂಡು ಪಕ್ಕೆ ಹಿಡಿದುಕೊಂಡು ಪರಾರಿಯಾದ ನಮ್ಮ ಕೊರವೇಶ್ವರ

—ರಾಮಿ

ಗಡಂ ಕಡಲೇಕಾಯಿ ಅಂತಾ ಕೂಗ್ತಾ ಬೀದಿವ್ಯಾಪಾರ ಮಾಡುತ್ತಿದ್ದವನೊಬ್ಬನು ಕಡಲೆಕಾಯಿ ಮಾರುಕ್ಕೆ ಅಂತ ಪಂಜಾಬಿನ ಕಾಂಗ್ರೆಸ್ ಕಚೇರಿಗೆ ಹೋದಾಗ, ಅವನನ್ನೇ ಹಿಡಿದು ಅಭ್ಯರ್ಥಿಯಾಗಿ ನಿಲ್ಲಿಸಿದರಂತೆ.

—ಕಾಂಗ್ರೆಸ್ ಕಚೇರಿ ಹತ್ತಿರ ಹೋದರೆ ಅಪಾಯ ಎಷ್ಟು ಎನ್ನುವುದು ಇದರಿಂದ ತಿಳಿಯುತ್ತೆ.

ಮೋಜಿನ ಪ್ಯಾರಿಸ್-ಮೂರು ಹಗಲು

ಹುಡುಗನಾಗಿದ್ದಾಗ ನಮ್ಮೂರಿನ ಪ್ಯಾರಿಸ್ ಹೇರ್ ಕಟಿಂಗ್ ಸೆಲೂನಿಗೆ ಸೋದರಮಾವ ಒಮ್ಮೆ ಕರೆದುಕೊಂಡು ಹೋಗಿದ್ದರು. ೧೦-೧೨ ವರ್ಷದ ಪ್ರಾಯ. ಸೆಲೂನಿಗೆ ಮೊದಲು ಬಾರಿ ಕಾಲಿರಿಸಿದ್ದು ಆಗಲೇ. ಅದಕ್ಕೆ ಮುಂಚೆ ಮನೆ ವರಾಂಡ ದಲ್ಲಿ ಕ್ಷೌರಿಕನ ಹತ್ತಿರ ತಲೆ ಮಾಡಿಸಿಕೊಂಡು ಮನೆಯನ್ನು ಸುತ್ತಿ ಹಿತ್ತಲಿಗೆ ಹೋಗಿ ಅಲ್ಲಿ ಭಾವಿಕಟ್ಟೆಯ ಬಳಿ ಯಾರಾದರೂ ಸಚೇಲ ಸ್ನಾನ ಮಾಡಿಸಿದ ಮೇಲೆ, ಮನೆ ಒಳಕ್ಕೆ ಹೋಗುತ್ತಿದ್ದೆ ಆದಕಾರಣ ಹೇರ್‌ಕಟಿಂಗ್ ಸೆಲೂನಿಗೆ ಮಡಿ ಮೈಲಿಗೆ ಇಲ್ಲದೆ ಹೋಗುವುದೇ ಒಂದು ಸಾಧನೆ ಎನಿಸಿತ್ತು. ಆ ಸೆಲೂನಿನಲ್ಲಿ ಅಪ್ಸರೆ ಸ್ತ್ರೀಯರ ಫೋಟೋಗಳಿದ್ದುವು. ಮನುಷ್ಯನು ಸಸ್ತನಿ ಪ್ರಾಣಿ ಎಂದು ನೆನಪು ಕೊಡುತ್ತಿದ್ದುವು, ಆ ಫೋಟೋಗಳು ಆಗಿನಿಂದ ನನ್ನ ಮನಸ್ಸಿನಲ್ಲಿ ಪ್ಯಾರಿಸ್ ಅಂದರೆ ಅರೆನಗ್ನ ಸ್ತ್ರೀಯರು ಮೋಜು ಮಾಡುವ ಸ್ವರ್ಗ ಎಂದು ಒಂದು ರೀತಿಯ ಊಹೆ.

ನಾಲ್ವತ್ತು ವರ್ಷಗಳಾದನಂತರ ಪಾರಿಸ್ಸಿನವಿಮಾನನಿಲ್ದಾಣದಲ್ಲಿ ಇಳಿದಾಗ, ಹಳೆಯ ನೆನಪೇ ಉಕ್ಕಿ ಉಕ್ಕಿ ಬರುತ್ತಿತ್ತು. ಇಳಿವಯಸ್ಸಿನಲ್ಲಿ ಇಲ್ಲಿಗೆ ಏಕೆ ಬಂದೆ ಎಂದು ಒಮ್ಮೆ ಅನ್ನಿಸಿತು. ತುಂಬು ಪ್ರಾಯದಲ್ಲಿ ಯಾವ ಹಳ್ಳಿ ಕೇರಿಯಲ್ಲಿದ್ದರೂ ಜತೆ ಇದ್ದರೆ ಅದೇ ಪ್ಯಾರಿಸ್ಸಿನ ತರಹ ಇರುತ್ತೆ. ಇಳಿವಯಸ್ಸಾದಮೇಲೆ ದಿಟವಾದ ಪ್ಯಾರಿಸ್ಸಿಗೆ ಹೋಗಬೇಕಾಗುವುದು, ಜೀವನದ ಧರ್ಮ, ಎಂದು ಆಮೇಲೆ ತೋಚಿತು. ಅಂತೂ ಬಂದಿದ್ದಾಯಿತಲ್ಲ. ಮೂರು ಹಗಲು ಮೂರು ರಾತ್ರಿ ನೋಡೇಬಿಡುವ ಕಣ್ಣಲ್ಲಿ ಕಣ್ಣಿಟ್ಟುಕೊಂಡು ಕಂಡೇ ಬಿಡುವ ಎಂದು ನಿರ್ಧರಿಸಿದೆ.

ಸುಮಾರು ಹನ್ನೊಂದು ಗಂಟೆ ಬೆಳಿಗ್ಗೆ ವಿಮಾನ ನಿಲ್ದಾಣದಲ್ಲಿ ಇಳಿದಾಗ. ಹನ್ನೊಂದುವರೆಯ ಹೊತ್ತಿಗೆ ಬಸ್ ಹತ್ತಿ ಊರೊಳಕ್ಕೆ ಹೊರಟೆವು.

ವಿಮಾನ ನಿಲ್ದಾಣದಿಂದ ಊರೊಳಕ್ಕೆ ಹೋಗಬೇಕಾದರೆ ಯಥಾಪ್ರಕಾರ ೧೦-೧೫ ಮೈಲು ಬಸ್ ಪ್ರಯಾಣ.

ಊರೊಳಕ್ಕೆ ಹೋಗುವ ಮೊದಲು ಮೂರು ನಾಲ್ಕು ಸಣ್ಣಪುಟ್ಟ ಹಳ್ಳಿಗಳು. ದಾರಿಯ ಪಕ್ಕದಲ್ಲಿ ಸಿಕ್ಕವು ಹೇರ್ ಕಟಿಂಗ್ ಸೆಲೂನ್ ಚಿತ್ರಗಳ ತರಹ.

ಏನೊಂದೂ ಕಾಣಿಸಲಿಲ್ಲ. ಆದರೆ ಪ್ರತಿ ಹಳ್ಳಿಯಲ್ಲೂ ರಸ್ತೆಯ ಅಂಚಿನಲ್ಲಿ, ತಾವೇ ಚಿತ್ರಿಸಿದ ವರ್ಣಚಿತ್ರಗಳನ್ನೂ ಕಲಾವಿದರು ಮಾರಾಟಕ್ಕೆ ಇರಿಸಿದ್ದರು. ಫ್ರೆಂಚ್ ನಾಡು ಕಲಾವಿದರ ಬೀಡು ಎಂದು ಹೆಸರು ಬರುವುದಕ್ಕೆ ಇದೂ ಕಾರಣ ಎನಿಸಿತು. ಹಳ್ಳಿ ಹಳ್ಳಿಗಳಲ್ಲೂ ಮಾರಾಟಕ್ಕೆ ವರ್ಣಚಿತ್ರಗಳನ್ನಿಟ್ಟಿದ್ದರೆ ಅದನ್ನು ಕೊಳ್ಳುವವರು ಇರಲೇಬೇಕಲ್ಲ! ಅದೂ ಒಂದು ಲಾಭದಾಯಕ ಉದ್ಯಮವೇ ಆಗಿರಬೇಕಲ್ಲ! ನಮ್ಮೂರಿನ ಕಲಾವಿದನ ಹಾಗೆ ಸಂತಸದಾಯಕ ಚಿತ್ರಗಳನ್ನು ಬಿಡಿಸಿ, ನಂತರ ಹೊಟ್ಟೆಪಾಡಿಗಾಗಿ ಅದನ್ನು ಮಾರಲು ಹೋದಾಗ, ಆತ ಪಡುವ ಕಷ್ಟ, ಸಂಕಟ, ಕಡೆಗೆ ಹೋದಷ್ಟು ಬೆಲೆಗೆ ಅದನ್ನು ಮಾರಿ ಎರಡು ದಿನ ಹೊಟ್ಟೆ ಹೊರೆದುಕೊಳ್ಳುವ ಪರಿಸ್ಥಿತಿ ಇಲ್ಲಿಲ್ಲವಲ್ಲ! ಅನ್ನಿಸಿತು.

ಹೋಟೇಲ್ ನಾರ್ಮಂಡಿಯಲ್ಲಿ ನಾವು ಇಳಿದುಕೊಂಡಿದ್ದು. ಜಗತ್ ಪ್ರಸಿದ್ಧ ಲೂವ್ರೆ ಮ್ಯೂಸಿಯಂಗೆ ಅತಿ ಹತ್ತಿರದಲ್ಲಿತ್ತು ಆ ಹೋಟೆಲ್. ಅಲ್ಲಿದ್ದ ಸಿಬ್ಬಂದಿಯೂ ಅಲ್ಪ ಸ್ವಲ್ಪ ಇಂಗ್ಲೀಷ್ ಮಾತನಾಡುತ್ತಿದ್ದರು. ಸೇಲಂ ಕಡೆಯವರು ಕನ್ನಡಕ್ಕೆ ತಮಿಳು ಛಾಯೆ ಇಟ್ಟು ಮಾತನಾಡುಲ್ಲವೇ? ಆ ತೆರನಾದ ಇಂಗ್ಲೀಷ್. ಆದರೂ ಪರಸ್ಪರ ಅರ್ಥ ಮಾಡಿಕೊಳ್ಳುವುದು ಸಂಜ್ಞೆಗಳಿಲ್ಲದೇ ಸಾಧ್ಯವಾಗಿತ್ತು.

ಊರಿಂದ ಹೊರಟಾಗ ಪ್ಯಾರಿಸ್ಸಿನಲ್ಲಿ ಬಲು ಮುದ್ದಾದ ರೇಷ್ಮೆ ಸೀರೆಗಳು ಸಿಗುತ್ತವೆ. ಇಂತಹ ಕಡೆ ಇಂತಹ ಅಂಗಡಿಯಲ್ಲಿ ವಿಚಾರಿಸಿ ಸಿಗುತ್ತೆ ಎಂದು ಹೇಳಿದ್ದರು. ಪ್ಯಾರಿಸ್ಸಿನಲ್ಲಿ ಹಗಲು ಕಾಲ ಕಳೆಯುವುದು ಹೇಗೆ? ಮ್ಯೂಸಿಯಂಗಳನ್ನು ನೋಡುವುದು. ಅವುಗಳಲ್ಲಿ ಒಂದು ಗಂಟೆಯಿಂದ ಒಂದು ವರ್ಷದ ಕಾಲ ಕಳೆಯಬಹುದು. ಮೂರು ದಿನಗಳಲ್ಲಿ ಏನು ತಾನೆ ಸಾಧ್ಯ? ಒಂದೇ ಗಂಟೆ ಸಾಕು ಎಂದುಕೊಂಡೆ. ನಮ್ಮಲ್ಲಿ ಬೇಲೂರು, ಹಳೇಬೀಡು, ಸೋಮನಾಥಪುರ ಇದ್ದ ಹಾಗೆ ಪ್ಯಾರಿಸ್ ನಲ್ಲಿ ಕೂಡ ಪುರಾತನ ದೇಗುಲಗಳಿವೆ. ಅವನ್ನೆಲ್ಲಾ ಒಂದು ಬೆಳಿಗ್ಗೆ ಸುತ್ತು ಹಾಕಿ ಬಂದರಾಯಿತು. ಲೋಕಪ್ರಸಿದ್ಧವಾದ ಸ್ವತಂತ್ರ ಕಲಾವಿದರು ಅತಿ ಸ್ವತಂತ್ರ ಜೀವನ ನಡೆಸುತ್ತಾ ಕಲಾರಾಧನೆಯನ್ನು ರೇಗಿದಾಗ ಮಾಡುವ ಮೌಂಟ್‌ಮಾರ್ಟರ್‌ಅನ್ನು ಒಂದು ಹಗಲು ಮುಗಿಸಿದರಾಯಿತು. ಹಗಲಿನ ಮಿಕ್ಕ ಹೊತ್ತನ್ನೆಲ್ಲಾ ಸೀರೆ ಅಂಗಡಿ ಹುಡುಕುವುದರಲ್ಲಿ, ಸೀರೆ ಕೊಳ್ಳುವುದರಲ್ಲಿ ಕಳೆಯಬಹುದು ಎಂದು ಅಂದಾಜು ಹಾಕಿದೆ.

ಯೋಜನೆಯ ಪ್ರಕಾರ ಕಾರ್ಯೋನ್ಮುಖನಾದೆ. ಮ್ಯೂಸಿಯಂಗಳು, ದೇಗುಲಗಳು ಮೌಂಟ್ ಮಾರ್ಟರ್ ಎಲ್ಲಾ ಮುಗಿಯಿತು. ಸೀರೆ ಅಂಗಡಿ ಹುಡುಕುವುದಕ್ಕೆ ಹೊರಟೆ. ಆ ಅಂಗಡಿಯ ವಿಳಾಸವನ್ನು ಹಾದಿಯಲ್ಲಿ ಸಿಕ್ಕವರಿಗೆ ತೋರಿಸುವುದು, ಅವರು ಸನ್ನೆ ಮಾಡಿ ತೋರಿದ ದಾರಿ ಹಿಡಿಯುವುದು, ಇದೇ ಕಾರ್ಯಕ್ರಮ ಮೂರು ಜನ ಹಾದಿಯಲ್ಲಿ ಮೂರು ತರಹ ಸೂಚನೆ ಕೊಟ್ಟರು. ನಾಲ್ಕನೆಯವ

ಅಂಗೈಯಲ್ಲಿ ಯಾವುದೋ ಚಿತ್ರವನ್ನು ಮುಚ್ಚಿಟ್ಟುಕೊಂಡು "ಪಿಸ್ಸ್" ಅಂತ ಸಣ್ಣ ಸಿಳ್ಳೆ ಹಾಕಿದ. ಅರವತ್ತರ ಪ್ರಾಯದ ಧಡಿಯ. ಏನಯ್ಯಾ ಎಂದು ಹುಬ್ಬೆತ್ತಿ ಅವನತ್ತ ಹೋದೆ. ಇಂಗ್ಲೀಷ್ ಬರಬಹುದು, ದಾರಿ ತೋರಿಸಾನು ಅಂತ. ಅವ ಅಂಗೈಯಲ್ಲಿದ್ದ, ಮುಂಗೈಯ್ಯಲ್ಲಿ ಮುಚ್ಚಿದ್ದ ಫೋಟೋ ಒಂದನ್ನು ಅರೆ ತೋರಿಸಿದ. ಪುರಾತನ ದೇವಸ್ಥಾನಗಳ ತೇರುಗಳ ಮೇಲೆ, ದೃಷ್ಟಿಪರಿಹಾರಾರ್ಥವಾಗಿ ಕೆಲವು ಜತೆ ವಿಗ್ರಹಗಳನ್ನು ಕೆತ್ತಿರುವುದಿಲ್ಲವೇ? ಅಂತಹ ಚಿತ್ರಗಳು ಐದು ಫ್ರಾಂಕ್ ಎಂದು ಐದು ಬೆರಳುಗಳನ್ನು ತೋರಿಸಿದ. "ಪಿಸ್ಸ್" ಅಂತ ನಾನೂ ಸಿಳ್ಳೆ ಹೊಡೆದು ನಿನಗೆ ಪಂಗನಾಮ ಎಂದು ಹೇಳಿ ಷರಾಯಿ ಜೇಬಿನಲ್ಲಿ ಕೈಹಾಕಿಕೊಂಡು ಮುಲಾಜಿಲ್ಲದೆ ಮುಂದೆ ಸಾಗಿದೆ.

ಕಡೆಗೂ ಸೀರೆ ಅಂಗಡಿ ಸಿಕ್ಕಿತು. ಮಹಡಿಯ ಮೇಲಿತ್ತು. ಅಲ್ಲಿದ್ದ ಮೂವರು ಹೆಣ್ಣುಮಕ್ಕಳಿಗೂ ಇಂಗ್ಲೀಷ್ ಬರುತ್ತಿತ್ತು. ಅಂಗಡಿಯ ಮಾಲೀಕ ಭಾರತದವ. ಅಂದರೆ ಅವನ ತಾತನ ಕಾಲಕ್ಕೆ ಪ್ಯಾರಿಸ್ಸಿಗೆ ವ್ಯಾಪಾರಕ್ಕೆ ಬಂದು ಅಲ್ಲೇ ನೆಲೆಸಿದ ಭಾರತೀಯ ಮನೆತನ ಅವನದು. ಆತನೂ ಒಲು ಒಲುಮೆಯಿಂದ ನನ್ನ ಹತ್ತಿರ ಇದ್ದ ಹಣವನ್ನೆಲ್ಲಾ ಸೀರೆಗಳ ಮೇಲೆ ವಿನಿಯೋಗಿಸುವಂತೆ ಮಹಾ ಪ್ರಯತ್ನಮಾಡಿ, ಯಶಸ್ಸುಗಳಿಸಿದ. ಅಂಗಡಿ ಸಿಬ್ಬಂದಿಯ ಆ ಮೂರೂ ಫ್ರೆಂಚ್ ಮಹಿಳೆಯರು, ೪೦, ೩೦, ೨೦ ರ ಪ್ರಾಯದವರು ಒಬ್ಬಾಕೆಯಾದರೂ ಪ್ಯಾರಿಸ್ ಹೇರ್ ಕಟಿಂಗ್ ಸೆಲೂನಿನ ಚಿತ್ರಗಳಂತಿಲ್ಲ. ಹದಿನಾರಾಣೆ ವೈದಿಕ ಬ್ರಾಹ್ಮಣ ಮನೆಯ, ಹೂವಿಳ್ಯಕ್ಕೆ ಮಡಿಯಲ್ಲಿ ಹೊರಟ ಮುತ್ತೈದೆಯರಂತೆ ಕಾಣಿಸಿದರು. ಯಾರಿಗೆ ಸೀರೆ, ಅವರ ವಯಸ್ಸೆಷ್ಟು, ಅವರ ಬೆಳವಣಿಗೆ ಹೇಗೆ, ಬಣ್ಣ ಎಂತು ಎಂದೆಲ್ಲಾ ಸೌಜನ್ಯದಿಂದ ಕೇಳಿ ಅದಕ್ಕೆ ಸರಿಯಾಗಿ ಸೀರೆಗಳನ್ನು ಚುನಾಯಿಸಿ, ಕೈಲಿಟ್ಟರು.

ಯಾವ ದೇಶಕ್ಕೆ ಹೋಗಲಿ ಭಾರತೀಯ ಉಡುಪನ್ನು ಬಿಡಬಾರದು ಎಂದು ನನ್ನ ಅಭಿಮತ ಮುಚ್ಚಿದ್ದ ಕಾಲರಿನ ಕಪ್ಪು ಅಂಗಿ, ಬಿಳಿ ಧಳುಕಿನ ಷರಾಯಿ ನಮ್ಮ ಈ ಉಡುಪೇ ಶ್ರೇಷ್ಠ ಅಂತ. ಈ ಏರ್ಪಾಡಿನಿಂದ ಒಂದು ಪ್ರಯೋಜನ. ದಿನಾಲೂ ಸ್ವಚ್ಛ ಷರ್ಟ್ ಹಾಕಬೇಕಿಲ್ಲ. ತುದಾ ಷರ್ಟು ಹಾಕಲೇಬೇಕು ಎಂದೂ ಇಲ್ಲ ಕಾಲರ್ ನೆಕ್ ಟೈ ಇವುಗಳ ಗಲಭೆ ಇಲ್ಲ. ಪರಊರಿನವರಿಗೂ ನಮ್ಮನ್ನು ಕಂಡರೆ, ಅವರನ್ನು ಅನುಕರಿಸಲಿಲ್ಲ ಎಂದು ಕಂಡರೆ, ಅವರಿಗೂ ಮರ್ಯಾದೆ ತೋರಿಸೋಣ ಎಂದೆನಿಸುತ್ತದೆ. ಅದುದರಿಂದ ಕರಿ ಮುಚ್ಚಿದ ಅಂಗಿ, ಬಿಳಿ ಷರಾಯಿ ಧರಿಸಿ ಅಂಗಡಿಗೆ ಹೋಗಿದ್ದೆ. ಕೊಂಡ ಸೀರೆಗಳ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದಿದ್ದೆ.

ಅಂಗಡಿಯಲ್ಲಿ ಗುಜು ಗುಜು ಪ್ರಾರಂಭವಾಯಿತು. ಅಂಗಡಿಯ ಮಾಲೀಕ ಸರ ಸರ ಎಂದು ಅಡ್ಡಾಡಲಾರಂಭಿಸಿದ. ಅಂಗಡಿಯ ಒಳಕ್ಕೆ ಭಾರತೀಯನೊಬ್ಬ

ಫ್ರೆಂಚ್ ಮಹಿಳೆಯ ಜತೆಯಲ್ಲಿ ಬಂದಿದ್ದ. ಮಹರಾಜಾ, ಮಹರಾಜಾ ಎಂದು ಅಂಗಡಿ ಸಿಬ್ಬಂದಿ ಗುಸು ಗುಸು ಮಾಡಿತು. ಬಂದಿದ್ದ ಮಹರಾಜಾ ನನ್ನನ್ನೇ ನೋಡಿದ. "ಹತ್ತಿರ ಬಂದು, ಯಾವಾಗ ಪ್ಯಾರಿಸ್ಸಿಗೆ ಬಂದಿರಿ" ಎಂದು ಕೇಳಿದ. ಅವನ ಪರಿಚಯ ನನಗಿರಲಿಲ್ಲ. ಕುದುರೆ ಜೂಜಿನಲ್ಲಿ ಪೆಚ್ಚುಮುಖ ಹಾಕಿಕೊಂಡು ಹುಚ್ಚುನಾಯಿಗಳ ತರಹ ಅತ್ತ ಇತ್ತ ಓಡಾಡುತ್ತಾ ಕಾಲಕಳೆಯುವ, ಸಣ್ಣ ಪುಟ್ಟ ಮಾಜಿ ಮಹಾರಾಜರ ತರಹವೇ ಇವನ ಮುಖವು ಕಾಣಿಸುತ್ತಿತ್ತು. ನನಗೆ ಯಾವ ಮಹಾರಾಜರ ಪರಿಚಯವೂ ಇಲ್ಲ. ಇಲ್ಲವಲ್ಲಾ ಅಂತ ದುಃಖವೂ ಇಲ್ಲ. ಹಾಗಿರುವಾಗ್ಗೆ ಇವ ಎಲ್ಲಿ ಗಂಟುಬಿದ್ದ. ಇನ್ನೆಲ್ಲಿ ಸಾಲ ಕೇಳ್ತಾನೋ? ಎಂದು ಸ್ವಲ್ಪ ಸಂಶಯವೂ ಬಂದಿತು. ಅವನೇ ಅಂದ "ನೀವು ಕೊಲಂಕಾ ಅಲ್ಲವಾ" ಅಂದ. ಅಲ್ಲ ಅಂದೆ. "ನಾನು ಬರಿ ಲಂಕಾದಹನ ಮಾಡಿದವ ಹೆಸರು ಹನುಮಂತರಾಯ ಕೆಲಸ ಅಪರ ಕರ್ಮ" ಎಂದೆ.

"ಹಾಗೆಯೇ? ಕೋಲಂಕಾ ಅಂತ ಅಂದುಕೊಂಡೆ. ಅವರ ಹಾಗೆಯೇ ಇದ್ದೀರಿ." ಎಂದ. ಮುಂದು ನಡೆದು ಹೊರಟು ಹೋದ.

ಅಂಗಡಿಯ ಮಾಲೀಕ, ಅಂಗಡಿಯ ಸಿಬ್ಬಂದಿಯ ಮೂರೂ ಹೆಣ್ಣು ಮಕ್ಕಳು ನನಗೆ ಜೋತು ಬಿದ್ದರು. "ನಾನೂ ಒಬ್ಬ ಮಹರಾಜಾ; ಬೂಟಾಟಿಕೆ ಮಾಡುತ್ತ ಕೇವಲ ನೂರು ಫ್ರಾಂಕ್‌ಗಳ ವ್ಯಾಪಾರ ಮಾಡಿದ್ದೀನಿ. ನ್ಯಾಯವಾಗಿ ಲಕ್ಷಾಂತರ ತೆತ್ತು ಆ ಹೆಣ್ಣು ಮಕ್ಕಳಿಗೂ ಕೈತುಂಬ ಬಕ್ಷೀಸ್ ಕೊಡಬೇಕಾಗಿತ್ತು" ಎಂದು ಅವರ ಮನಸ್ಸಿನಲ್ಲಿ ಅನ್ನಿಸಿತೇನೋ. ಲಗ್ಗೆ ಹಾಕಿದರು ನನಮೇಲೆ.

ಅರ್ಧಗಂಟೆ ಕೂತು, ಅಂಗಿ ಬಿಚ್ಚಿ, ಷರಟು ತೆಗೆದು ಜನಿವಾರ ತೋರಿಸಿ. ಆದರ ಬ್ರಹ್ಮ ಗಂಟು ಹಿಡಿದು ಪ್ರಮಾಣ ಮಾಡಿ ಹೇಳಿದೆ. ಬಡವ ನಾನು ಇಷ್ಟೇ ದುಡ್ಡು ನನಗೆ ಭಿಕ್ಷ ಸಿಕ್ಕಿರೋದು. ಇದರಲ್ಲಿ ನಾಲ್ಕೂ ಹೆಣ್ಣು ಮಕ್ಕಳಿಗೆ ಅರಿಶಿನ ಕುಂಕುಮಕ್ಕೆ ಅಂತ ನಾಲ್ಕು ಅರಿವೆ ಕೊಂಡಿದ್ದೇನೆ. ಈಗ ಬರಿಕೈ ಭಿಕಾರಿ. ಬಾಯಾರುತ್ತಾ ಇದೆ. ಒಂದು ಬಟ್ಟಲು ಕಾಫಿ ಕುಡಿಯೋಣ ಅಂದರೆ ಕಾಸಿಲ್ಲ. ತುಟಿಗೆ ನಾಲಿಗೇನ ಆಡಿಸ್ತಾ ಇದೀನಿ. ನೋಡಿ" ಎಂದು.

ನಂಬಿದರು ಸತ್ಯ ಸಂಗತಿಯನ್ನು ಅವರು. ಕನಿಕರದಿಂದ ಅವರೇ ಒಂದು ಬಟ್ಟಲು ಕಾಫಿ ತರಿಸಿಕೊಟ್ಟರು. ಅಂಗಡಿ ಕರ್ಚಿನಲ್ಲಿ. ಆಮೇಲೆ ಹಿಂತಿರುಗಿದೆ.

ಕಾರ್ಮಿಕ ಮಂತ್ರಿ

ನಮ್ಮ ಕಾರ್ಖಾನೆಯಲ್ಲಿ ಗುಲ್ಲೋಗುಲ್ಲೆದ್ದಿತು. ಕೆಲಸಗಾರರೆಲ್ಲಾ ಇದ್ದಲ್ಲೇ ಕೂತರು. ಕೆಲಸ ಮಾಡುಲ್ಲ ಅಂದರು. ಹೊರಗೆ ಹೋಗುಲ್ಲ ಅಂದರು. ಎಲೆಡಿಕೆ ಹೊಗೆಸೊಪ್ಪು ಅಗಿಯುತ್ತಾ ಕಾರ್ಖಾನೆ ತುಂಬಾ ಉಗಿದರು.

ಕಾರಣ ಇಷ್ಟೇ! ಒಬ್ಬ ಕಾರ್ಮಿಕ ಕಳುವುಮಾಡಿದ ಮಾಲಿನ ಸಹಿತ ಸಿಕ್ಕಿ ಬಿದ್ದಿದ್ದ. ಅವನನ್ನು ವಿಚಾರಣೆಗೊಳಪಡಿಸಿ "ವಜಾ" ಹುಕುಂ ಹೊರಡಿಸಿತ್ತು. ಆ ಹುಕುಮನ್ನು ನೋಟೀಸ್ ಬೋರ್ಡಿಗೆ ಲಗತ್ತಿಸಿದಾಗ ಎಲ್ಲಾ ಕಾರ್ಮಿಕರೂ ಬೈಠಕ್ ಮುಷ್ಕರ ಆರಂಭಿಸಿದರು.

ಕಾರ್ಖಾನೆಯ ಆಸ್ತಿಪಾಸ್ತಿಗಳ ಸಂರಕ್ಷಣೆಗೆ ಪೋಲೀಸಿನವರನ್ನು ಕರೆಕಳಿಸಿದಾಗ "ಕ್ರೂರ ಕೃತ್ಯಗಳಾದರೆ ಆಗ ನಾವು ಬಂದು ಸಹಾಯಕ್ಕೆ ಇರುತ್ತೇವೆ. ಶಾಂತಿಯುತವಾದ ಸಂಪಿಗೆ ನಮ್ಮ ಸಹಾಯ ಅನವಶ್ಯಕ" ಎಂದು ಹೇಳಿದರು. ಮಗುವಿನ ಬೇನೆ ಹತ್ತಿದೆ ಬನ್ನಿ ಎಂದು ಡಾಕ್ಟರನ್ನು ಕರೆದರೆ, ಸಾಯೋಹಾಗೆ ಆದಾಗ ಬರುತ್ತೇನೆ ಎನ್ನುವ ವೈದ್ಯರ ನೀತಿಯ ತರಹಾ ಪೋಲೀಸಿನವರದು.

ಕಾರ್ಮಿಕ ಇಲಾಖಾ ಅಧಿಕಾರಿಗಳಿಗೆ ಅಹವಾಲು ಹೊತ್ತೆವು. ಆತ ಬಂದರು. ವಿಷಯ ತಿಳಿದುಕೊಂಡರು. "ಕಾನೂನು ಪ್ರಕಾರ ನೀವು ಸರಿಯಾಗಿ ವರ್ತಿಸಿದ್ದೀರಿ. ನಿಮ್ಮ ತಪ್ಪು ಏನೂ ಇಲ್ಲ" ಎಂದು ಹೇಳಿದರು. ಹೇಳಿ ಈಗ ನಾನು ಮನೆಗೆ ಹೋಗಬೇಕು. ಕಾರ್ಮಿಕರು ಯಾರಾದರೂ ಕಲ್ಲು ಬೀರಬಹುದು. ಕಾರಣ ನಿಮ್ಮ ಕಾರಿನಲ್ಲಿ ರಕ್ಷಣೆಯೊಡನೆ ನನ್ನನ್ನು ಮನೆಗೆ ತಲುಪಿಸುತ್ತೀರಾ ಎಂದು ಬೇಡಿದರು. ನಾನೇ ಅವರನ್ನು ಕಾರಿನಲ್ಲಿ ತಲೆ ಮರೆಸಿ ಕೂರಿಸಿ, ಮನೆಗೆ ತಲುಪಿಸಿದೆ.

ಅವರು ಇತ್ತ ತೀರ್ಪಿನ ನಕಲನ್ನು ನೋಟೀಸ್ ಬೋರ್ಡಿಗೆ ಲಗತ್ತಿಸಿದೆವು. ಬೈಠಕ್ ಮುಷ್ಕರ ಮುಂದುವರೆಯಿತು.

* * * *

ಕಾರ್ಖಾನೆಯ ಆಡಳಿತ ಮಂಡಳಿಯು ತುರ್ತು ಸಭೆ ಸೇರಿ, "ಇಂತಹ ಅನ್ಯಾಯವನ್ನು ಅನುಭವಿಸುವುದಕ್ಕಿಂತ, ಕಾರ್ಖಾನೆಯನ್ನು ಮುಚ್ಚುವುದೇ ಲೇಸು" ಎಂದು ತೀರ್ಮಾನಿಸಿತು. ಆದರೆ ದೊರೆಯ ತನಕ ದೂರು ಹೊರಬೇಕು, ಕಾರ್ಮಿಕ ಮಂತ್ರಿಗಳ ತನಕ ಅಹವಾಲು ತರೋಣ, ಆಮೇಲೆ ನಮ್ಮ ನಿರ್ಧಾರವನ್ನು ಕಾರ್ಯಗತ ಮಾಡೋಣ ಎಂದು ತೀರ್ಮಾನಿಸಿತು

ಕಾರ್ಖಾನೆಯ ಕಾರ್ಯವಾಹಕ ಮಂಡಲಿಯ ಪರವಾಗಿ ನಾವು ಮೂವರೂ ಕಾರ್ಮಿಕ ಮಂತ್ರಿಗಳನ್ನು ಮಾರನೆಯ ದಿನ ಭೇಟಿಯಾಗಬೇಕೆಂದು ಒಪ್ಪಿಕೊಂಡೆವು.

* * * *

ಮಧ್ಯರಾತ್ರಿ ಹನ್ನೆರಡರ ಹೊತ್ತಿಗೆ, ಸುಸ್ತು ಬಡಿದು ಉಣ್ಣಲಾರದೆ ಹಸಿವಿನಿಂದ ಸಂಕಟ ಪಡುತ್ತಾ ಬಿದ್ದಿದ್ದ ನನ್ನ ಟೆಲಿಫೋನ್ "ಕಾಟ್ರಿನ್ ಟ್ರಿನ್" ಉದಯರಾಗ ಹಾಡಿತು. ಈ ವೇಳೆಯ ಹೊತ್ತಿನಲ್ಲಿ ಬೈಠಕ್ ಮುಷ್ಕರದ ನಮ್ಮ ಕಾರ್ಮಿಕ ಸೋದರರು ಹಾಲಿಗಾಗಿ ಕೆಚ್ಚಲು ಕುಯ್ಯುವ ಸೋದರರು, ಕಾರ್ಖಾನೆಗೆ ಬೆಂಕಿ ಹಾಕಿದ್ದಾರೆ ಎಂಬ ಸುದ್ದಿಯನ್ನು ಊಹೆಯಲ್ಲಿ ಎದುರುಗೊಳ್ಳುತ್ತಾ ಟೆಲಿಫೋನನ್ನು ಕೈಗೆತ್ತಿಕೊಂಡೆ. ನಿದ್ರೆಗಣ್ಣಿನಲ್ಲೇ ಪೋಲೀಸ್ ಅಗ್ನಿ ನಿವಾರಣದಳ, ಇವರ ನಂಬರುಗಳನ್ನೂ ಟೆಲಿಫೋನ್ ನಿಘಂಟಿನಲ್ಲಿ ಹುಡುಕುತ್ತಾ ...

ದೂರವಾಣಿ ಹಾಲಕ್ಕಿಯಂತೆ ನುಡಿಯಿತು.

"ಇದು ಕಾರ್ಮಿಕ ಮಂತ್ರಿ, ಮಾತಾಡ್ತಾ ಇರೋದು, ನೀವೇನೇನ್ರೀ ಕಾರ್ಖಾನೆಯ ಪಾರುಪತ್ತೇಗಾರ್ರು ಯಾಕ್ರೀ ನೀವು ಅಂಬುಜನ ಗಂಡನನ್ನು ವಜಾ ಮಾಡಿದಿರಿ? ಸರ್ಕ್ರೀ ಮಂಡೀಲಿ ಕೆಲಸ ಮಾಡೋರು ಕೈ ನೆಕ್ಕಬಾರ್ದು ಅಂತ ಯಾವ ಕಾನೂನ್ರೀ ಹೇಳೋದು! ಅದನ್ನೇ ದೊಡ್ಡದು ಮಾಡಿ ಅಂಬುಜನ ಗಂಡನನ್ನು ವಜಾ ಮಾಡಿ, ಬೈಠಕ್ ಮುಷ್ಕರಕ್ಕೆ ದಾರಿ ಹಾಕಿ, ನಮ್ಮ ದೇಶದ ತುರ್ತು ಪರಿಸ್ಥಿತಿಯಲ್ಲಿ ನಮ್ಮ ಉತ್ಪಾದನೆಗೆ ಅಡ್ಡಿ ಮಾಡ್ತಿದ್ದೀರಲ್ರೀ! ನಾಳೇ ಬೆಳಿಗ್ಗೇನೆ ಅಂಬುಜಿ ಗಂಡನನ್ನು ಕೆಲಸಕ್ಕೆ ಸೇರಿಸಿಕೊಳ್ಳಿ ದೇಶಕ್ಕೆ ದ್ರೋಹ ಮಾಡಬೇಡಿ" ಎಂದು

ತ್ಸು ತ್ಸು ಮುಕ್ತಾಯದೊಡನೆ ಹಾಲಕ್ಕಿ ಹಾಲು ಹುಡುಕಿತು.

* * * *

ಎಚ್ಚೆತ್ತೆ. ಸುತ್ತಲೂ ಕತ್ತಲು ಎಚ್ಚೆತ್ತೆ, ದೀಪ ಹಚ್ಚಿದೆ. ನಾವು ಮೂವರಲ್ಲವೇ, ಕಾರ್ಮಿಕ ಮಂತ್ರಿಯನ್ನೂ ಭೇಟಿಯಾಗುವವರು! ನಾನೊಬ್ಬನೇ ಏಕೆ ನಿದ್ರೆ ಗೆಡಲಿ? ಉಳಿದಿಬ್ಬರನ್ನೂ ಟೆಲಿಪೋನ್ ಮಾಡಿ ಎಬ್ಬಿಸಿದೆ ಕಾರ್ಮಿಕ ಮಂತ್ರಿಗಳು ಹೀಗೆ ಟೆಲಿಫೋನ್ ಮಾಡಿದ್ದರು, ಎಂದು ಹೇಳಿದೆ.

ಮುಖಕ್ಕೆ ಮುತ್ತು ಕೊಟ್ಟು ಮ "ಕ್ಕೆ" "ಮ" ಒತ್ತು ಕೊಟ್ಟು ಮಂತ್ರಿಗಳು ಮಣಮಣಿದಿದ್ದರು. ಟೆಲಿಫೋನಿನಲ್ಲಿ ಹೊಟ್ಟೆಗಿಲ್ಲದೆ, ಮನದ ತಾಪದಿಂದ ನರಳುತ್ತಿದ್ದ ನಾನು "ಕಾರ್ಮಿಕ"ನನ್ನು "ಕಾಮಿಕ" ಎಂದು ಹ್ರಸ್ವದಲ್ಲಿ ಉಚ್ಚರಿಸಿದ್ದು ನ್ಯಾಯವೇ?

* * * *

ಅವರಿಬ್ಬರೂ, ಶ್ರೀಮಂತರಿಬ್ಬರೂ, ನಿದ್ರೆ ಮಾಡುತ್ತಿರಲಿಲ್ಲ. ನಾನು ಟೆಲಿಫೋನ್ ಮಾಡಿದ ಕೂಡಲೇ, ಒಂದು ಬಾರಿ "ಟ್ರಿನ್" ಆಗುತ್ತಲೇ, ಉತ್ತರಿಸಿದರು.

ನಾನಿತ್ತ ವರದಿಯನ್ನು ಕೇಳಿದ ಮೇಲೆ, ಮರು ಬೆಳಗ್ಗೆ ಆಡಳಿತ ಮಂಡಳಿಯ ತುರ್ತು ಸಭೆಯನ್ನು ಕರೆಯಬೇಕೆಂದೂ, ಅಲ್ಲಿ ಅಂತಿಮ ನಿರ್ಣಯವನ್ನು ಕೈಗೊಳ್ಳಬೇಕೆಂದೂ, ಅವರು ಸಲಹೆ ಮಾಡಿದರು. ಸಲಹೆ ಅಂದರೆ ಗೊತ್ತಲ್ಲಾ! ಅಳಿಯನ ಸಲಹೆ ತರಹ—ಹುಕುಂ ಅದು—

* * * *

ಮೂರನೆ ಬೆಳಗ್ಗೆ ಆಡಳಿತ ಸಭೆ ಸೇರಿತು. ಕಾಳರಾತ್ರಿಯಲ್ಲಿ ಕೇಳಿದ ಸುದ್ದಿಯನ್ನು ವಿವರಿಸಿದೆ ಅಧ್ಯಕ್ಷರು ಜಾಣರು. ಬಾಳ ನೀತಿಯನ್ನು ಅರಿತವರು. ಅವರು ಹೇಳಿದರು. "ನಾನೂ ಮುಗುಮ್ಮಾಗಿ ವಿಚಾರಿಸಿದೆ ನಾವು ವಜಾಮಾಡಿದ ಕಾರ್ಮಿಕನ ಹೆಂಡತಿ ಅಂಬುಜಮ್ಮ ಅಂತ. ಆಕೆ ಕಾರ್ಮಿಕ ಮಂತ್ರಿಗಳ ಕಿವಿ ಕಚ್ಚುವ ಸೌಭಾಗ್ಯವನ್ನು ಪಡೆದಿದ್ದಾಳೆ ಆದುದರಿಂದ ನಮ್ಮ ಹುಕುಂ ಅನ್ನು ಹಿಂತಿರುಗಿಸಿಕೊಂಡು ಕಾವಲುಗಾರನನ್ನಾಗಿ ಅಂಬುಜಮ್ಮನ ಗಂಡನನ್ನು ಬಡ್ತಿ ಕೊಟ್ಟು ವರ್ಗಾಯಿಸೋಣ. ಬಿರುಗಾಳಿ ಬೀಸಿದಾಗ ತಲೆತಗ್ಗಿಸಿದರೇ ಬಾಳಲು ಸಾಧ್ಯ" ಎಂದು. ಎಲ್ಲರೂ ಒಪ್ಪಿದರು ಅಂಬುಜಮ್ಮನ ಕಳ್ಳ ಗಂಡ ಕಾವಲುಗಾರನಾಗಿ ವರ್ಗಾಯಿಸಲ್ಪಟ್ಟ. ಬೈಠಕ್ ಮುಷ್ಕರ ಕೊನೆಗಂಡಿತು. ಕಾರ್ಖಾನೆ ಯಶಸ್ವಿಯಾಗಿ ಮುಂದುವರೆಯಿತು.

* * * *

ಅಧ್ಯಕ್ಷರ ಶಹಣೆತನದಿಂದ ಕಾರ್ಖಾನೆಯು ಪ್ರಗತಿ ಹೊಂದಿತು. ಕಾರ್ಮಿಕರ ಹಿತಕ್ಕಾಗಿ ದುಡಿಯುವ ಹೆಸರಾಂತ ಸಂಸ್ಥೆಯಾಯಿತು.

* * * *

ಆದರೂ "ಕಾಮಿಕಮಂತ್ರಿ" ಎಂದೇ ಆಡಳಿತದ ಒಳ ಸಭೆಗಳಲ್ಲಿ ಕರೆಯಲಾಗುತ್ತದೆ.

ಕುಮಾರ್

ಕಾರ್ಖಾನೆಯ ಕಾರ್ಯವಾಹಕ

———

ನಾಯಿಗೆ ನರಕವು ತಪ್ಪೀತೆ!!!

ಕಣ್ಣಂಚಿನ ನೀರೊರಸಿಕೊಂಡು ನೀರುಮನೆಗೆ ಹೋಗಿ ಚಿಗರೆಪುಡಿ ತಿಕ್ಕಿಕೊಂಡು ಮರುಳನ ಕೈಲಿ ನೀರು ಹೊಯ್ಸಿಕೊಂಡು ಭಾರವಾದ ಹೃದಯದಿಂದ ಮಠದ ಉಪನ್ಯಾಸದ ಕೊಠಡಿಗೆ ಬಂದು ಗಾಂಪರೊಡೆಯರು ಆಸನಾಪೀಡಿತರಾದರು. ಸೂತಕ ತೀರಿಸಿಕೊಂಡವರಂತೆ ಗುರುಶಿಷ್ಯರು ದುಃಖದಿಂದ ಕೂತಿದ್ದರು.

"ಒಳ್ಳೆ ಜಾತಿ ನಾಯಿ"—ಗದ್ಗಕಂಠದಿಂದ ಹೇಳಿದರು.

"ಗುರುವೆ ಮುಖ್ಯವಾಗಿ ನಾಯಿ ಜಾತಿ"—ಮರುಳ ಉವಾಚ.

"ದೊರ್ಸಾನಿ ಎಷ್ಟು ಅತ್ತಳೋ" ಮಂಕವಾಣಿ.

"ಆದರ ಋಣ ತೀರಿತು....ಗುರುಗಳೇ ದೊರ್ಸಾನಕ್ಕ ಅಳುತ್ತಲೇ ಕಾಗದ ಬರೆದಿರಬೇಕು....ಆ ಅಂಗ್ರೇಜಿ ಜನಕ್ಕೆ ನಾಯಿ ಅಂದ್ರೆ ಮಹಾ ಮೋಹ ಗುರುವೆ.... ಆ ಮಹಾತಾಯಿ ಅಕ್ಕರೆಯಿಂದ ನಿಮ್ಮನ್ನ ನೋಡ್ಕಂಡ ಹಾಗೇ ಆ ನಾಯಿನೂ ನೋಡ್ಕೊತಿದ್ದಳು...."

—ಮಡೆಯ ಪೇಚಾಡುತ್ತಾ ಹೇಳಿದ್ದ. ಲಂಡನ್ನಿನ ಬಡಾವಣೆ ಹೌನ್ಸ್ ಲೋವಿನಿಂದ ಪತ್ರ ಬಂದಿತ್ತು. ಗುರುಗಳು ಲಂಡನ್ನಿನಲ್ಲಿದ್ದಾಗ ದೊರ್ಸಾನಿಯೊಬ್ಬಳ ಮನೆಯಲ್ಲಿ ನಾಟ್‌ಪೆಯಿಂಗ್ ಗೆಸ್ಟ್ ಆಗಿದ್ದರಷ್ಟೆ. ಆಕೆ ಒಂದು ನಾಯಿ ಸಾಕಿದ್ದಳು. ಸ್ವಾಭಾವಿಕವಾಗಿ ನಾಯಿ ಕಂಡರಾಗದಿದ್ದ ಗುರುಗಳು ಗುರ್ಸಾನಿಯ ಮೇಲಿನ ಪ್ರೀತಿಗಾಗಿ ಆ ನಾಯಿಯನ್ನೂ ಮುದ್ದಾಡುತ್ತಿದ್ದರು.

ಆ ನಾಯಿ ಸತ್ತುಹೋಯಿತೆಂದು ಅತ್ತುಕೊಂಡು ಪತ್ರ ಬರೆದಿದ್ದಳು ಆಕೆ. ಆ ಕಾಗದ ಓದಿದ ಗುರುಗಳೂ ಶಿಷ್ಯರೂ ಸೂತಕಬಂದವರಂತೆಯೇ ಪೇಚಾಡಿಕೊಂಡಿದ್ದರು. ಸ್ನಾನಮಾಡಿ "ದೇವರೇ ಆ ನಾಯಿಗೆ ಸ್ವರ್ಗ ದೊರಕಲಿ" ಎಂದು ವಿಶೇಷ ಪ್ರಾರ್ಥನೆ ಮಾಡಿದರು. ಗುರುಗಳಿಗೆ ಒಂದು ಕ್ಷಣ ತಾವು ಇಂಗ್ಲೆಂಡಿನಲ್ಲಿ ದೊರ್ಸಾನಿಯ ಮನೆಗೆ ಬಂದೊಡನೆಯೇ ಬಾಲಾ ಆಡಿಸುತ್ತಾ ಮುಖದಲ್ಲಿ ದೊರ್ಸಾನಿಯ ನಗುವನ್ನೇ ಹೊರಸೂಸುತ್ತಾ ಕಾಲು ಮೈ ಆಡರುತ್ತಿದ್ದ ಪುಟ್ಟ ಜೂಲು ನಾಯಿಯ ಚಿತ್ರ ಮೂಡಿಬಂದಿತ್ತು.

" ಅಯ್ಯೋ ಪಾಪ "—ಎಂದರು.

ಗುರುಗಳೇ ನನಗೊಂದು ಸಂದೇಹ ಬಂದಿದೆ. ಪರಿಹಾರ ಮಾಡೋಣಾಗ ಬೇಕು "—ಎಂದು ಕೈ ಮುಗಿದು ಕೇಳಿದ್ದ ಮಂಕ.

" ಅಯ್ಯಾ ಮಂಕ—ನಮಗೆ ಪ್ರಿಯವಾಗಿದ್ದ ನಾಯಿ ಸತ್ತು ನಾವು ಅದರ ಸ್ವರ್ಗಕ್ಕಾಗಿ ಪ್ರಾರ್ಥಿಸುತ್ತಿರುವಾಗ ನೀನು ಯಾವ ಸಂದೇಹಕ್ಕೆ ತುತ್ತಾಗಿ ಸಾಯು ತ್ತಿರುವಿ ? "

" ಅದೆ—ಆ ನಾಯಿ ಸ್ವರ್ಗಕ್ಕೆ ಹೋಗುತ್ತದೆಯೆ? ಅಂತ ಅನುಮಾನ."

" ಶಿಷ್ಯಾ ನಾಯಿಗಳೆಲ್ಲಾ ಸಾಮಾನ್ಯವಾಗಿ ಸ್ವರ್ಗಕ್ಕೇ ಹೋಗೋದು — ಅಕಸ್ಮಾತ್ ದಾರಿ ತಪ್ಪೀತೂಂತ ನಮ್ಮದೂ ಪ್ರಾರ್ಥನೆ ಸೇರಿಸಿದೆವು ಅಷ್ಟೆ."

" ಗುರುಗಳೇ ಕನಕದಾಸರು ನಾಯಿಗೆ ಅನ್ಯಾಯ ಮಾಡಿದರು "

" ನಾಯಿಯಲ್ಲಿ ನಾರಾಯಣ ನನ್ನ ಕಂಡ ಆ ಪುಣ್ಯಾತ್ಮರು ಅನ್ಯಾಯ ಮಾಡಿದರೂಂದ್ರೇನೊ ಮಂಕಾ "

" ಅವರು ಒಂದು ಹಾಡಿನಲ್ಲಿ ಅಪ್ಪಣೆ ಕೊಡಿಸಿಲ್ಲವೇ ಗುರುಗಳೇ........ || ನ್ಯಾಯವ ಬಿಟ್ಟು ಅನ್ಯಾಯ ನಡೆಯುವ ನಾಯಿಗೆ ನರಕವು ತಪ್ಪೀತೇ || .... ಅಂತ ಕೇಶವನೊಲುಮೆಯು ಆಗುವ ತನಕ ಅನ್ನೋ ಹಾಡಿನಲ್ಲಿ ಬರೆದಿಲ್ಲವೇ? ಅದನ್ನು ನಾನು ಕನ್ನಡ ಮೂರ್ನೆ ಕ್ಲಾಸಲ್ಲಿ ಗಟ್ಟಿಮಾಡಿರಲಿಲ್ವೆ? ಅದು ಬಾಯಿಗೆ ಬರೋವರ್ಗೂ ಬೆಂಚಿನಮೇಲೆ ಒಂಟಿ ಕಾಲಲ್ಲಿ ನಿಂತಿರಲಿಲ್ವೇ...."

" ಸಾಕು-ಸಾಕು ನಿನ್ನ ಬಾಲಲೀಲೆಗಳ ವರದಿ ಬೇಕಿಲ್ಲ. ಈಗ ಬೇಕಾದ್ದು ನಾಯಿಯ ನರಕದ ವಿಷಯ ಅಲ್ವೇ?...."

" ಹೌದು ಗುರುಗಳೇ ಅದೇ ಹೇಳ್ತಿದ್ದೆ ....ನಾಯಿಯಲ್ಲಿ ನಾರಾಯಣನನ್ನು ಕಂಡರೂಂತ ಹೆಸರಾದ ಚಿನ್ನದ ದಾಸರು ಅದು ಹ್ಯಾಗೆ ಅನ್ಯಾಯಿಗೆ ನಾಯಿಯನ್ನು ಹೋಲಿಸಿದರೂ"

—ಗುರುಗಳು ಧ್ಯಾನಾಸಕ್ತರಾಗಿ ಕಣ್ಣು ಮುಚ್ಚಿದರು. ಶಿಷ್ಯರು ಕೆಲವೊಮ್ಮೆ ಇಂತಹ ಪ್ರಶ್ನೆಗಳನ್ನು ಹಾಕಿದಾಗ ಕಣ್ಣು ಬಿಟ್ಟರೆಲ್ಲಿ ಮತ್ತೆ ಮುಚ್ಚಿಕೊಳ್ಳುವರೋ ಎಂದು ಹಾಗೇ ಕೂತುಬಿಡುವುದು ನಡೆದು ಬಂದ ದಾರಿ. ಮಂಕನ ಪ್ರಶ್ನೆ ನ್ಯಾಯವಾಗಿತ್ತು ಈಗಿನ ಕಾಲದಲ್ಲಿ ನ್ಯಾಯ, ನಿಯತ್ತು, ಉಳಿದಿದ್ದರೆ ಅದು

ನಾಯಿಯಲ್ಲಿ. ಅನ್ನ ಹಾಕಿದ ಧಣಿಗೆ ಎಂದೂ ಅನ್ಯಾಯ ಬಯಸೋ ಪ್ರಾಣಿ ಅಲ್ಲ ನಾಯಿ. ಓಟು ಕೊಟ್ಟು ಪಲ್ಲಕ್ಕಿಯಲ್ಲಿ ಕೂಡಿಸಿದ ನಾಯಕರುಗಳಂತೆ ಎಂದೂ ಓಟು ಕೊಟ್ಟ ಕೈನೇ ಕಚ್ಚುವ ಅನ್ಯಾಯ ಮಾಡುವ ಪ್ರಾಣಿಯಲ್ಲ ನಾಯಿ. ಕಂತ್ರಿ ನಾಯಿಯೇ ಆಗಿರಲಿ ಎಂಜಲು ಕೈಯಲ್ಲಿ ಓಡಿಸಿದ್ದರೂ ತಿಂದ ಅಗುಳಿನ ಋಣ ತೀರಿಸಲು ಬಣ್ಣದ ಕೋಲು ಹಿಡಿದು ಹೊಡೆಯಲು ಬಂದಾಗಲೂ ನಿಯತ್ತಿನಿಂದ ಬಾಲಾ ಆಡಿಸುತ್ತಿ ಬಡಕಲು ನಾಯಿ. ಇದಕ್ಕೆ ನರಕ ಎಲ್ಲಿಂದ ಬರಬೇಕು? ಧರ್ಮರಾಯ ಸ್ವಯಂ ಸ್ವಂತ ಕಾಲುಗಳಿಂದ ಸ್ವರ್ಗಾರೋಹಣ ಪರ್ವ ನಡೆಸಿದಾಗ ಜೊತೆಗೆ ಬಂದಿದ್ದೂ ನಾಯಿಯೆ. ಕಾಲು ನಡಿಗೆಯಲ್ಲಿ ಸ್ವರ್ಗ ಮುಟ್ಟಿದ ಪುಣ್ಯ ಪ್ರಾಣಿ ನಾಯಿ ಎಂದಾಯಿತು. ದತ್ತಾತ್ರೇಯನ ಸುತ್ತಾ ಇರುವ ನಾಲ್ಕು ನಾಯಿಗಳು ನಾಲ್ಕು ವೇದಗಳ ಸಂಕೇತವಂತೆ. ಇಂತಹ ಪವಿತ್ರ ನಾಯಿಯನ್ನು ಅನ್ಯಾಯ ಮಾಡಿದ ಮನುಷ್ಯನಿಗೇಕೆ ಕನಕದಾಸರು ಹೋಲಿಸಿದರು? ತಲೆ ಕೆಟ್ಟು ಕೆಟ್ಟ ಹಾಲಿನಂತೆ ಮೊಸರಾಗಿ ಹೋಗಿತ್ತು. ಈ ವಿಚಾರ ಧಾರೆಯ ದೆಸೆಯಿಂದ ಗಾಂಪರೊಡೆಯರು ನಿಜಕ್ಕೂ ಜಾಣರಂತೆಯೇ ಚಿಂತಿಸತೊಡಗಿದರು.

ಒಳ್ಳೆ ಪಗಡದಸ್ತಾದ ಪ್ರಶ್ನೆಯನ್ನೆ ಹಾಕಿ ತಾನೂ ಶಹಣ್ಯಾನೇ ಎನ್ನುವಷ್ಟರ ಮಟ್ಟಿಗೆ ಜಂಬದಿಂದ ಗುರುಗಳ ಮುಂದೇ ಹುಬ್ಬು ಹಾರಿಸುತ್ತಾ ಕೂತಿದ್ದ ಮಂಕು

"ಶ್ರೀ ಸಾಮಾನ್ಯನಿಗಾಗಿ ಈ ಎಲ್ಲ ಆಡಳಿತ ಸೂತ್ರ"

"ಕೇವಲ ಕಾಮನ್ ಮ್ಯಾನಿಗಾಗೇ ಇಡೀ ಮಂತ್ರಿಮಂಡಲ ಪೇಚಾಡಿಕೊಂಡು ಪ್ರವಾಸಭತ್ಯ ಪಡೆಯುತ್ತಿರುವುದು"—ಮಡೆಯ.

"ಶರಾವತಿ ವಿದ್ಯುತ್ ಯೋಜನೆ ಆಗುತ್ತಿರೋದೇ ಬೀದಿಯ ಸಾಮಾನಶಿ ಓಟುದಾರನಿಗಾಗಿ"—ಮಡ್ಡಿ.

"ಸರ್ವೇಜನಾ ಸುಖಿನೋ ಭವಂತುಗಾಗಿಯೇ ಇಪ್ಪತ್ತು ಲಕ್ಷದ ರಾಜಭವನ ಮಾಡುವ ಯೋಚನೆ ಮಾಡಿದ್ದು"—ಮರುಳ.

"ಎಲ್ಲರ ಹಿತಕ್ಕಾಗೇ ಸಗಟು ಧಾನ್ಯ ವ್ಯಾಪಾರಿಗಳ ಮಳಿಗೆ ಬಿಟ್ಟು, ಕೇವಲ ಚಿಲ್ರೆ ಬೆಲೆ ಪಟ್ಟಿ ನಮೂದಿಸಿದ ಅರು ಕೇಜಿ ಅಕ್ಕಿ ಮಾರುವ ಚಿಕ್ಕ ಶೆಟ್ಟಿಯನ್ನು ಜೈಲಿಗೆ ಕಳಿಸೋದು"—ಮಂಕ.

"ಸಿಮೆಂಟಿಗೆ ಪರ್ಮಿಟ್ಟು—ಸಕ್ಕರೆ ಮೂಟೆ ಪರ್ಮಿಟ್ಟು—ಎಲ್ಲಾ ಕಚ್ಚುವ ಹುಚ್ಚು ನಾಯಿಗಳಂತೆ ಓಟು ಹಿಡಿದಿರುವವನ ಹಿತಕ್ಕಾಗಿಯೆ" ಎಂದ ಮುಠ್ಠಾಳ. ತಲೆ ತಲೆಗೊಂದು ಮಾತಾಡಿ ಗದ್ದಲ ಹಾಕಿದರು. ಗುರುಗಳು ಕಣ್ಣುಬಿಡಲಿಲ್ಲ. ನಾಯಿ

ಯಾರು ?—ಅನ್ಯಾಯಿಯೇ ನಾಯಿಯೆ ? ತರ ತರಹ ಕಲ್ಲು—ಮಣ್ಣು—ಹೆಂಟೆ—ಕೂಡಿಸಿ ಕಸವನ್ನೇ ಅಕ್ಕಿ ಎಂದು ಮೂಟೆ ಮೂಟೆ ಕೂಡಿಟ್ಟು ಬಡಪಾಯಿಗಳಿಗೆ ಅದನ್ನೇ ಕೇಜಿಗೆ ರೂಪಾಯಿಯಂತೆ ಮಾರುವ ಅನ್ಯಾಯಿ ಮನುಷ್ಯನೇ ನಾಯಿಯೆ? ಆತನಿಗೆ ನಾಯಿ ಎಂದು ಕರೆದು ನಾಯಿಗೆ ಅವಮಾನ ಮಾಡುವುದು ನ್ಯಾಯವೆ? ಗುರುಗಳಿಗೆ ತೋಚದಾಯಿತು.

" ಗುರುಗಳೇ ಕಲಿಕಾಲದಲ್ಲಿ ನ್ಯಾಯ-ಅನ್ಯಾಯಗಳಿಗೆ ಅಷ್ಟೊಂದು ವ್ಯತ್ಯಾಸ ಏರಲಿಕ್ಕಿಲ್ಲ ಅಲ್ಲವೆ ?" ಎಂದು ಗುರುಗಳ ಎಡಗಿವಿಯಲ್ಲಿ ಕೂಗಿದ್ದ ಮರುಳ. ಈ ಕೂಗಿಗೆ ಗಾಂಪರೊಡೆಯರು ಕಣ್ಣು ಬಿಟ್ಟರು. ಪಾಪ ನಿಜಕ್ಕೂ ಗುರುಗಳು ಫಳಾರಕ್ಕೆ ದಿನಸಿ ಇಲ್ಲದೆ ಹಸಿದು ಕಂಗೆಟ್ಟು ಹಾಗೆ ಕಣ್ಣು ಮುಚ್ಚಿದ್ದರು

ದೊಡ್ಡ ದೊಡ್ಡ ಮಠಗಳವರಿಗೆ ಬೇಕಾದಷ್ಟು ಶಿಷ್ಯರುಗಳು ಕಾಣಿಕೆ ಸಲ್ಲಿಸಿ ಮಠದ ಉಗ್ರಾಣ ತುಂಬಿಸುತ್ತಿದ್ದರು ಕಾಂಗ್ರೆಸ್ ಮಠದ ಶಿಷ್ಯರಂತೂ ಟೊಂಕ ಕಟ್ಟಿ ಕೈ ಹೊಸೆದು ರಾಶಿ ರಾಶಿ ಸಣ್ಣಕ್ಕಿ ರಸಬಾಳೆ ಗೊನೆ ಸವರನ್‌ಗಳನ್ನು ಗುರುಗಳಂತೆಯೇ ಶೋಭಿಸುವ ಹಿರಿಯ ಪುಡಾರಿಗಳ ಪಾದಕ್ಕೆ ಸುರುವಿದ್ದರು. ಆದರೆ ಕೇವಲ ಸಿಂಪಲ್ ಕಾಮನ್ ಭಾರತೀಯನಂತೆಯೆ ಹೊಟ್ಟೆಗಿಲ್ಲದ ಈ ಬಡ ಗಾಂಪ ಮಠವನ್ನು ಯಾರು ಕೇಳಬೇಕು ? ಸದಾಚಾರ ಹುಟ್ಟಿದ್ದೇ ಈ ಮಠದಲ್ಲಿ ಸಾಧು ಷೇವಕರೆಲ್ಲ ಈ ಮಠದ ಭೋಳೆ ಶಿಷ್ಯರು

ಇಂತಹ ಕಂಗಾಲುಮಠದ ಗುರುಶಿಷ್ಯರು ಯಾವ ರಾಜಕೀಯ ಮಠಕ್ಕೂ ಶರಣು ಹೋಗದೆ ತಮ್ಮದೆ ಆದ ಪ್ರತಿಷ್ಠಿತ ಗಾಂಪತನವನ್ನು ಪ್ರದರ್ಶಿಸುತಾ ಉಪಾಸ ಸಾಯುತ್ತಿರುವಾಗ ಅತ್ತ ಇಂಗ್ಲೆಂಡಿನ ದೊರ್ಸಾನಿಯ ನಿಯತ್ತಿನ ನಾಯಿಯು ಸತ್ತುಹೋದ ಸುದ್ದಿಯು ಬಂದಿತ್ತು. ಇತ್ತ ಶಿಷ್ಯರುಗಳು " ನಾಯಿ " ಎಂಬ ಪದಕ್ಕೆ ಯಾರು ಯೋಗ್ಯರು ಎಂದು ಕೇಳಿ ಕೇಳಿ ಪೀಡಿಸುತ್ತಿದ್ದರು

ಕಣ್ಣುಬಿಟ್ಟ ಗುರುಗಳು ಮತ್ತೆ ಆಕಳಿಸಿದರು. ಆದರೆ ಮತ್ತೆ ನಿದ್ರಾಯೋಗಕ್ಕೆ ಹೋಗದೆ ಬರಿಯ ವಿಭೂತಿಯನ್ನೇ ಕೊಂಚ ತಿಂದು ಚೇತರಿಸಿಕೊಂಡು—

" ಶಿಷ್ಯರಾದ ಮಂಕ, ಮಡೆಯ, ಮುಠ್ಠಾಳ, ಮಡ್ಡಿ, ಮರುಳಯ್ಯಗಳಿರಾ—ನೀವು ಸಕಾಲದಲ್ಲಿ ಸರಿಯಾದ ಪ್ರಶ್ನೆ ಕೇಳಿದ್ದೀರಿ ಯಜಮಾನ್ತಿಗಾಗಿ ಪ್ರಾಣಾರ್ಪಣ ಮಾಡಲೂ ತಯಾರಿದ್ದ ದೊರ್ಸಾನಿಯಮ್ಮಳ ಪ್ರೀತಿಯ ಶ್ವಾನ ತನ್ನ ಶ್ವಾಸವನ್ನು ಕಡೆಯಬಾರಿ ನಿಶ್ವಾಸಿಸಿ ಸ್ವರ್ಗ ಸೇರಿದ್ದು ಸರಿಯಷ್ಟೆ ಆ ದುಃಖದ ಸೂತಕ ತೀರಿಸಿಕೊಂಡಾಗ ನೀವು ನಾಯಿಗೆ ನರಕ ಉಂಟೆ ?—ನಮ್ಮ ನಾಯಿ ಯಾರು ?—ಅನ್ಯಾಯಿಗೆ ಯಾವ ಸ್ವರ್ಗ, ನಮ್ಮ ಸುತ್ತಾ ಜನ ನಿಯತ್ತಿಲ್ಲದೆ ನಾನಾ ದುರ್ಮಾರ್ಗ

ಗಳಿಂದ ಆವೃತರಾಗಿದ್ದರೂ —ನ್ಯಾಯಿಗಳೂ,— ಸತ್ಯಾತ್ಮರೂ— ಧರ್ಮಾತ್ಮರೂ ತಾವೇಯು ಎಂಬ ಸೋಗಿನಲ್ಲಿ ತಮ್ಮ ನರಕ ತಾವೇ ನಿರ್ಮಿಸಿಕೊಂಡು ಕೇವಲ ಎಲ್ಲಾ ಕಾರ್ಯವೂ ಕಾಮನ್ ಮ್ಯಾನಿನ ಸಲುವಾಗೇ, ಎಂದು ಭಾಷಣದಲ್ಲಿ ಮಾತ್ರ ಜನಾನುಕೂಲತೆ ಮಾಡಿಕೊಡುವ ಭರವಸೆ ಗದ್ದುಗೆ ಏರಿದಾರಭ್ಯ ಮಾಡುತ್ತಲೇ ಬಂದಿರುವುದು ನ್ಯಾಯುವೆ? ಎಂದು ನಾನಾ ಪ್ರಶ್ನೆ ಹಾಕಿ ನನ್ನ ಹಸಿವನ್ನು ಹೆಚ್ಚಿಸಿದ್ದೀರಿ....ನಾವು ಈ ವಿಚಾರ ಯೋಚನೆ ಮಾಡಿದ್ದೇವೆ. ಒಂದು ರೀತಿಯ ತೀರ್ಮಾನಕ್ಕೆ ಬಂದಿದ್ದೇವೆ. ಬರೀ ಅಸ್ತಿ ಇರುವ ಮರಗಳನ್ನು ವಶ ಪಡಿಸಿಕೊಂಡು ಆರ್ಭಟಿಸುವ ವ್ಯಾಘ್ರಗಳಂತಹವರಿಗೆ ನಮ್ಮ ಗಾಂಪ ಮಠ ಕಣ್ಣಿಗೇಕೆ ಬಿದ್ದಿಲ್ಲ? ನಮ್ಮ ಮಠಕ್ಕೆ ಗ್ರ್ಯಾಂಟೇಕೆ ಕೊಡಬಾರದು?—ಇರಲಿ ಅದೆಲ್ಲಾ ಸ್ವಾರ್ಥದ ಮಾತು ಬೇಡ! ಈಗಿನ ಮುಖ್ಯ ಪ್ರಶ್ನೆಗೆ ಉತ್ತರ....“ನಾಯಿ—ನಾಯಿಯೆ, ಅನ್ಯಾಯಿ ಅನ್ಯಾಯಿಯೆ. ಅನ್ಯಾಯಿ ನಾಯಿಗಳಿಲ್ಲ—ನ್ಯಾಯುವ ಬಿಟ್ಟನ್ಯಾಯುವ ಮಾಡುವ ನರರಿಗೆ ಅನ್ಯಾಯುವಾಗಿ ನಾಯಿ ಎಂದು ಕರೆದು, ನಾಯಿಗೆ ಅನ್ಯಾಯ ಮಾಡುವವರಿಗೆ ನರಕ ತಪ್ಪೀತೆ?”

—ಇಷ್ಟು ಮಾತ್ರ ಹೇಳಿ ಗಾಂಪರೊಡೆಯರು ಸಧ್ಯದ ಬೆಲೆಯ ಏರಿಕೆಯ ದೆಸೆಯಿಂದಾಗಿ, ಮಠಕ್ಕೆ ಏನನ್ನೂ ಕೊಳ್ಳಲಾಗದ ತುರ್ತು ಪರಿಸ್ಥಿತಿ ಒದಗಿ ಬಂದಿದ್ದು, ಬಹು ಮಂದಿ ಬಡ ಭಾರತೀಯರಂತೆ ಅವರೂ ಜಭ್ರಾಗಿ “ಜೈ” ಎಂದು ಕೂಗಿ, ಸೊಗಸಾದ ಕಾವಿ ಬಟ್ಟೆಯನ್ನು ಒದ್ದೆಮಾಡಿ ಹೊಟ್ಟೆಯ ಮೇಲೆ ಹಾಕಿಕೊಂಡು ಶಿಷ್ಯರ ಸಮೇತ ಉಪವಾಸ ವ್ರತವನ್ನು ಎಂದಿನಂತೆ ಮುಂದುವರಿಸಿದರು. “ಸತ್ತು ಸ್ವರ್ಗ ಸೇರಿದ ದೊರ್ಸಾನಿ ನಾಯಿಯೇ ಸುಖಿ”—ಅಂದ ಮಡೆಯ.

—ದಾಶರಥಿ ದೀಕ್ಷಿತ್.

ಚಾಮರಾಜನಗರದಲ್ಲಿ ಅನ್ಯಾಯ ಮಸ್ ಕಾಗದ ಬಂದ ಕಾರಣ ಹೆಣ್ಣು ಕೊಡಲು ಕನ್ಯಾಪಿತೃ ಮುಹೂರ್ತದಲ್ಲಿ ನಿರಾಕರಿಸಿದನಂತೆ.

—ಗಂಡು ಪೀಡೆ ತಪ್ಪಿತು ಅಂತ ಸುಖವಾಗಿದ್ದ ಅಂತೀರಾ? ಇಲ್ಲ. ಇನ್ನೊಬ್ಬರು ತತ್‌ಕ್ಷಣ ಬಂದು ತಮ್ಮ ಮಗಳನ್ನು ಕೊಟ್ಟು ಕೆಡವೇ ಬಿಟ್ಟರು—ದುರದೃಷ್ಟ ಅಂದರೆ ಇದು—ಆಶೆ ತೋರಿಸಿ ಹಳ್ಳಕ್ಕೆ ನೂಕುತ್ತೆ.

* * * *

ಹಾಸ್ಯಲೇಖಕರ ಪ್ರತಿಮೆಗಳನ್ನು ಎಲ್ಲೂ ಸ್ಥಾಪಿಸಿಲ್ಲ (ಸುದ್ದಿ)

—ಕಾಗೆ ಗೂಬೆಗಳು ಬದುಕಿರುವಾಗಲೇ ಅವರನ್ನು ಕುಕ್ಕಿ ಕಲ್ಮಷದಿಂದ ವರೆಸುವುದರಿಂದ, ಸತ್ತಮೇಲೆ ಅದಕ್ಕೇ ಮೀಸಲಾದ ಪ್ರತಿಮೆಗಳೇಕೆ ಎಂಬ ಅರಿವಿನಿಂದ ಹೀಗಾಗಿರಬಹುದು!!

ಕೊರವಂಜಿ

ಕೆಂಪೇಗೌಡ ಸರ್ಕಲ್, ಬೆಂಗಳೂರು-೯

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ

ತಿಳಿ ಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು, ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು, ಸುಲಭವಾಗಿ ಓದುವಂತೆ ತಿಳಿ ಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ಮಿಕ್ಕ ವಿಚಾರಗಳನ್ನು ವ್ಯವಸ್ಥಾಪಕರಲ್ಲೂ ಪ್ರಸ್ತಾಪಿಸಬೇಕು.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩—೦೦
ಬಿಡಿ ಪ್ರತಿ ಕೇವಲ ೨೫ ಪೈಸೆ.

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು. ಹಾಗೆ ಬದಲಾವಣೆಯಾದ ವಿಳಾಸವನ್ನು ತಿಳಿಸುವಾಗ ತಮ್ಮ ಚಂದಾ ಸಂಖ್ಯೆಯನ್ನೂ ತಿಳಿಸಬೇಕಾಗಿ ವಿನಂತಿ

NEWS AGENTS

1. ಶ್ರೀ ಮರಿಯಪ್ಪ,
   ನೀಲಕಂಠೇಶ್ವರ ಸ್ಟೋರ್ಸ್,
   ಮರಕೆರ.
2. ಶ್ರೀ ಆದಪ್ಪನಾಯಿಕ್,
   ಹಟ್ಟಿ. ರಾಯಿಚೂರ್ ಜಿಲ್ಲಾ.
3. ಶ್ರೀ ಕೆ. ನಾರಾಯಣರಾವ್
   ಸಿರಾ.

Printed by B. S. Iyengar, Bangalore-2
Publisher—B. N. Gupta Editor—M. Sivaram